

# “ವೇದನೆ – ಅದಕ್ಕೆ ಕಾರಣ ಹಾಗೂ ಚಿಕಿತ್ಸೆ”

ಅಖಿಲ ಭಾರತ ಪತ್ರಿಕೆ

ಏಪ್ರಿಲ್ – 2013



*"Our body's cells must hold the Immortal's flame."*

- Sri Aurobindo

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

## "ವೇದನೆ – ಅದಕ್ಕೆ ಕಾರಣ ಹಾಗೂ ಚಿಕಿತ್ಸೆ"

(ಪೃಥ್ವಿ ರಚನೆಗೊಂಡದ್ದು ಸಂತೋಷಕ್ಕಾಗಿ, ವೇದನೆಗಾಗಿ ಅಲ್ಲ)

**ಭಾಗ – I**

**ಅನು : ಡಾ. ಕೆ.ಎಸ್. ಆಮೂರ**

ಇಡೀ ಸಮಸ್ಯೆಯ ಹೊರ ಆವರಣ 3

ವೇದನೆ ಏಕಿದೆ? 6

ವೇದನೆಗೆ ಚಿಕಿತ್ಸೆ ಒದಗಿಸುವುದು ಹೇಗೆ? 9

**ಅನು : ಶ್ರೀ ಪುರುಷೋತ್ತಮ ಗಲಗಲಿ**

ವೇದನೆ ಯಾವುದರತ್ತ ಕೊಂಡೊಯ್ಯುತ್ತದೆಯೋ ಅದರ ರಹಸ್ಯ 11

**ಅನು : ಡಾ. ಕೆ.ಎಸ್. ಆಮೂರ**

ವಿಶ್ವದ ನೈಜತೆ ದಿವ್ಯಾನಂದವಾಗಿದೆ 13

ತೊಂದರೆಗಳನ್ನು ನಿವಾರಿಸುವ ಸಾಮರ್ಥ್ಯಪೂರ್ಣ ರೀತಿ 16

**ಭಾಗ – II**

ದೇವರು ಪೀಡಕನೆ? – ನಮ್ಮ ದೃಷ್ಟಿಯ ಸೀಮಿತತೆ 19

ಹೊಡೆತಗಳಿಂದ ಮನುಷ್ಯ ಕಲಿಯಬೇಕಾದದ್ದು ಏನು? 20

**ಅನು : ಶ್ರೀ ವೀರೇಂದ್ರ ಸಿಂಪಿ**

ಮೊಳೆಗಳ ಹಾಸಿಗೆಯ ಆಸರೆ ಪಡೆಯುವ ಸಾಧು 26

**ಅನು : ಡಾ. ಕೆ.ಎಸ್. ಆಮೂರ**

ವೇದನೆಯ ಎರಡು ಬಗೆಗಳು 28

ಭೌತಿಕ ವೇದನೆ – ಮೂರು ಹಂತಗಳಲ್ಲಿ ಅದು ಕಲಿಸಿಕೊಡುವ ಶಿಕ್ಷಣ 32

**ಭಾಗ – III**

ವೇದನೆಗೊಳಗಾದ ಹೃದಯಗಳಲ್ಲಿ ಭರವಸೆ ಪುನರುಜ್ವಲಗೊಳ್ಳುವಂತೆ ಮಾಡಲು ಕೆಲವು ಪುಟಗಳು 35

ಒಂದು ಸಮಯದಲ್ಲಿ ಆಳವಾದ ವೇದನೆಯೊಂದು ನಮ್ಮ ಚಿತ್ತಸ್ಥೈರ್ಯವನ್ನು ಕುಂದಿಸಿದಾಗ 39

ಸಾವಿತ್ರಿ ಮಹಾಕಾವ್ಯದಿಂದ ಆಯ್ದ ಸಾಲುಗಳು 40

ಯೋಚನೆಗಳು ಹಾಗೂ ಸೂಕ್ತಿಗಳು 41

**ವಾರ್ತಾಪತ್ರ** 44

## ಇಡೀ ಸಮಸ್ಯೆಯ ಹೊರ ಆವರಣ

ಸ್ಪಷ್ಟವಾಗಿ ಮನುಷ್ಯನ ಸ್ವಭಾವದ ವಿಶೇಷತೆ ಎಂದರೆ ತಾನು ಜೀವಿಸುವುದನ್ನು ಗಮನಿಸಲು ಆವನಲ್ಲಿರುವ ಕ್ಷಮತೆ. ಪಶು ಸ್ವಯಂಪ್ರೇರಣೆಯಿಂದ, ಸ್ವಯಂ ಚಾಲಿತವೆನ್ನುವಂತೆ ಜೀವಿಸುತ್ತದೆ, ತಾನು ಜೀವಿಸುವುದನ್ನು ಕನಿಷ್ಠಮಟ್ಟದಲ್ಲಿ ಗಮನಿಸುತ್ತದೆ. ಆ ಕಾರಣದಿಂದಾಗಿ ಅದು ಶಾಂತಿಯಿಂದಿರುತ್ತದೆ, ಚಿಂತೆ ಮಾಡುವುದಿಲ್ಲ. ಅಪಘಾತ ಇಲ್ಲವೆ ರೋಗದಂತಹ ಕಾರಣದಿಂದ ಅದು ವೇದನೆಗೆ ಒಳಗಾಗಿದ್ದರೂ ಅದನ್ನು ಅದು ಅವಲೋಕಿಸುವುದಿಲ್ಲ, ತನ್ನ ಪ್ರಜ್ಞೆಯಲ್ಲಿ ಹಾಗೂ ಭವಿಷ್ಯತ್ತಿನಲ್ಲಿ ಪ್ರಕ್ಷೇಪಿಸುವುದಿಲ್ಲ, ರೋಗ ಇಲ್ಲವೆ ಅಪಘಾತದ ಬಗ್ಗೆ ಕಲ್ಪನೆ ಮಾಡಿಕೊಳ್ಳುವುದಿಲ್ಲ ಎಂಬ ಕಾರಣದಿಂದಾಗಿ ಈ ವೇದನೆ ಕನಿಷ್ಠಮಟ್ಟದ್ದಾಗಿರುತ್ತದೆ.

ಮುಂದೇನಾಗುವುದು ಎಂಬುದರ ಚಿಂತೆ ಮನುಷ್ಯನೊಂದಿಗೆ ಪ್ರಾರಂಭ–ವಾಯಿತು. ಮತ್ತು ಈ ಚಿಂತೆಯೇ ಅವನ ಯಾತನೆಗೆ ಏಕೈಕ ಕಾರಣವಲ್ಲದಿದ್ದರೂ ಪ್ರಧಾನ ಕಾರಣ. ಪ್ರಜ್ಞೆಯನ್ನು ಈ ರೀತಿ ವಸ್ತುನಿಷ್ಠವಾಗಿರಿಸುವುದರಿಂದ, ತಳಮಳ, ಕಳವಳಕಾರಿ ಕಲ್ಪನೆಗಳು, ಚಿಂತೆ, ಯಾತನೆ, ಭವಿಷ್ಯತ್ತಿನಲ್ಲಿ ಬರಲಿರುವ ಅನಾಹುತಗಳ ನಿರೀಕ್ಷೆ ಇವೆಲ್ಲ ಪ್ರಾರಂಭವಾದವು, ಪರಿಣಾಮವಾಗಿ ಬಹಳಷ್ಟು ಜನರು – ಅತಿ ಕಡಿಮೆ ಪ್ರಜ್ಞೆಯಿದ್ದವರಲ್ಲ, ಅತ್ಯಂತ ಹೆಚ್ಚಿನ ಪ್ರಜ್ಞೆಯಿದ್ದವರು – ನಿರಂತರ ಯಾತನೆಯಲ್ಲಿರುತ್ತಾರೆ. ಉದಾಸೀನನಾಗಿರಲು ಸಾಧ್ಯವಿಲ್ಲದ ರೀತಿಯಲ್ಲಿ ಮನುಷ್ಯ ಹೆಚ್ಚಿನ ಪ್ರಜ್ಞೆಯುಳ್ಳವನಾಗಿದ್ದಾನೆ. ಏನು ಸಂಭವಿಸಲಿದೆ ಎಂಬುದನ್ನು ತಿಳಿದುಕೊಳ್ಳುವಷ್ಟು ಪ್ರಜ್ಞೆಯುಳ್ಳವನಾಗಿಲ್ಲ. ಪೃಥ್ವಿಯ ಮೇಲಿನ ಎಲ್ಲ ಜೀವಿಗಳಲ್ಲಿ ಮನುಷ್ಯ ಅತ್ಯಂತ ದುಃಖಿಯಾದವನು ಎಂದು, ತಪ್ಪು ಮಾಡುವ ಭಯವಿಲ್ಲದೆ, ಹೇಳಬಹುದು. ಮನುಷ್ಯನಿಗೆ ಹಾಗಿರುವ ರೂಢಿಯಾಗಿದೆ, ಏಕೆಂದರೆ ಅವನು ಅದನ್ನು ತನ್ನ ಪಿತೃಗಳಿಂದ ಆನುವಂಶಿಕವಾಗಿ ಪಡೆದ ಸ್ಥಿತಿಯಲ್ಲಿದ್ದಾನೆ. ಉಚ್ಚ ಹಂತಕ್ಕೇರುವ ಈ ಆಧ್ಯಾತ್ಮಿಕ ಕ್ಷಮತೆಯಿಂದ ಮಾತ್ರ ಮತ್ತು ಪಶು ಸದೃಶ ಪ್ರಜ್ಞೆಯ ಸ್ಥಾನದಲ್ಲಿ ಉಚ್ಚತರ ಆಧ್ಯಾತ್ಮಿಕ ಪ್ರಜ್ಞೆಯನ್ನು ಇರಿಸುವುದರ ಮೂಲಕ ಮಾತ್ರ ಅವನ ಸತ್ತೆಯಲ್ಲಿ ಅಸ್ತಿತ್ವದ ಗುರಿಯನ್ನು ನೋಡುವ ಮತ್ತು ಪ್ರಯತ್ನದ ಪರಾಕಾಷ್ಠೆಯನ್ನು ಪೂರ್ವಭಾವಿಯಾಗಿ ಕಂಡುಕೊಳ್ಳುವ ಕ್ಷಮತೆಯಷ್ಟೇ ಅಲ್ಲದೆ ತನ್ನನ್ನು ಇಡಿಯಾಗಿ ಸಮರ್ಪಿಸಿಕೊಳ್ಳಬಹುದಾದ, ಒಪ್ಪಿಸಿಕೊಡಬಹುದಾದ, ತನ್ನ ಜೀವನದ ಹಾಗೂ ಭವಿಷ್ಯದ ಜವಾಬ್ದಾರಿಯನ್ನು ಕೊಟ್ಟುಬಿಡಬಹುದಾದ, ಹಾಗಾಗಿ ಎಲ್ಲ ಚಿಂತೆಗಳಿಂದ



ಮುಕ್ತವಾಗಬಹುದಾದ ಉಚ್ಚತರ ಆಧ್ಯಾತ್ಮಿಕ ಸಾಮರ್ಥ್ಯದಲ್ಲಿ ಸ್ಪಷ್ಟ ದೃಷ್ಟಿಯ ವಿಶ್ವಾಸವೂ ಕೂಡ ಬರುವುದು.

ಸಹಜವಾಗಿ, ಮನುಷ್ಯ ಪಶು ಸದೃಶ ಪ್ರಜ್ಞೆಯಲ್ಲಿ ಮತ್ತೆ ಬಿದ್ದುಬಿಡುವುದು ಮತ್ತು ದೊರಕಿಸಿದ ಪ್ರಜ್ಞೆಯನ್ನು ಕಳೆದುಕೊಳ್ಳುವುದು ಅಸಾಧ್ಯವಾದದ್ದು, ಆದ್ದರಿಂದ ಅದಕ್ಕಾಗಿ ಒಂದೇ ಸಾಧನವಿದೆ, ಅವನಿರುವ ಸ್ಥಿತಿಯಿಂದ – ಆ ಸ್ಥಿತಿಯನ್ನು ನಾನು ದುಃಖದಾಯಕ ಸ್ಥಿತಿ ಎಂದು ಕರೆಯುತ್ತೇನೆ – ಹೊರಬರುವ ಮತ್ತು ಉಚ್ಚತರ ಸ್ಥಿತಿಯಲ್ಲಿ ಹೊರಹೊಮ್ಮುವ ಒಂದು ಮಾರ್ಗವಿದೆ. ಆ ಉಚ್ಚ ಸ್ಥಿತಿಯಲ್ಲಿ ಚಿಂತೆಯ ಸ್ಥಾನದಲ್ಲಿ ವಿಶ್ವಾಸಭರಿತ ಸಮರ್ಪಣ ಪ್ರಕಾಶಮಯ ಪರಾಕಾಷ್ಠೆಯ ನಿಶ್ಚಿತತೆ ಬರುತ್ತವೆ – ಈ ಮಾರ್ಗ ಪ್ರಜ್ಞೆಯನ್ನು ಬದಲಿಸುವುದಕ್ಕಾಗಿರುತ್ತದೆ.

ನಿಜ ಹೇಳುವುದಾದರೆ ಬೀಗದ ಕೈ ಗೊತ್ತಿರದ ಅಸ್ತಿತ್ವಕ್ಕೆ ಜವಾಬ್ದಾರ–ನಾಗಿರುವುದಕ್ಕಿಂತ ಹೆಚ್ಚು ದುಃಖದಾಯಕ ಸ್ಥಿತಿ ಮನುಷ್ಯನಿಗೆ ಬೇರೊಂದಿಲ್ಲ. ಎಂದರೆ ಮನುಷ್ಯನ ಬಳಿ ಆ ಅಸ್ತಿತ್ವಕ್ಕೆ ಮಾರ್ಗದರ್ಶನ ಮಾಡಬಹುದಾದ ಮತ್ತು ಸಮಸ್ಯೆಗಳಿಗೆ ಪರಿಹಾರ ಒದಗಿಸಬಹುದಾದ ಎಳೆಗಳಿರುವುದಿಲ್ಲ. ಪಶು ತನ್ನ ಮುಂದೆ ಸಮಸ್ಯೆಗಳನ್ನು ಇರಿಸಿಕೊಳ್ಳುವುದಿಲ್ಲ, ಅದು ಕೇವಲ ಜೀವಿಸುತ್ತದೆ. ಅದರ ಹುಟ್ಟುಗುಣ ಅದನ್ನು ಚಲಿಸುವಂತೆ ಮಾಡುತ್ತದೆ. ಅದು ಸಾಮೂಹಿಕ ಪ್ರಜ್ಞೆಯನ್ನು ನೆಚ್ಚಿಕೊಂಡಿರುತ್ತದೆ. ಆ ಪ್ರಜ್ಞೆಗೆ ಆಂತರಿಕ ಜ್ಞಾನವಿರುತ್ತದೆ, ಹುಟ್ಟುಗುಣಕ್ಕಿಂತ ಉಚ್ಚವಾಗಿರುತ್ತದೆ, ಆದರೆ ಅದು ಸ್ವಯಂಚಾಲಿತವಾದದ್ದು, ಸ್ವಯಂಪ್ರೇರಿತ–ವಾದದ್ದು, ಯಾವುದೊಂದು ವಿಷಯ ಕುರಿತು ಸಂಕಲ್ಪ ಮಾಡುವ, ಅದು ಸಂಭವಿಸುವಂತಾಗಲು ಪ್ರಯತ್ನ ಮಾಡುವ ಆವಶ್ಯಕತೆ ಪಶುವಿಗೆ ಇರುವುದಿಲ್ಲ. ಅದು ಆ ರೀತಿ ಸ್ವಾಭಾವಿಕವಾಗಿ ಇರುತ್ತದೆ ಮತ್ತು ತನ್ನ ಜೀವನದ ಜವಾಬ್ದಾರಿ ಹೊತ್ತಿರುವುದಿಲ್ಲ ಹಾಗಾಗಿ ಅದಕ್ಕೆ ಚಿಂತೆ ಇರುವುದಿಲ್ಲ. ಮನುಷ್ಯನೊಂದಿಗೆ ಅವನು ತನ್ನ ಮೇಲೆ ಅವಲಂಬಿಸಬೇಕಾದ ಭಾವನೆ ಹುಟ್ಟಿಕೊಳ್ಳುತ್ತದೆ ಮತ್ತು ಅವನಲ್ಲಿ ಅವಶ್ಯವಾದ ಜ್ಞಾನ ಇಲ್ಲದೇ ಇರುವುದರಿಂದಾಗಿ ಪರಿಣಾಮ ನಿರಂತರ ಯಾತನೆಗೆ ಒಳಗಾಗುವುದಾಗಿರುತ್ತದೆ. ತನ್ನದೇ ಪ್ರಜ್ಞೆಗಿಂತ ಉಚ್ಚತರ ಪ್ರಜ್ಞೆಗೆ ಸಮರ್ಪಣ ಮಾಡಿಕೊಳ್ಳುವುದರೊಂದಿಗೆ ಈ ಯಾತನೆ ಕೊನೆಗೊಳ್ಳಬಹುದು. ಆ ಉಚ್ಚತರ ಪ್ರಜ್ಞೆಗೆ ಅವನು ತನ್ನನ್ನು ಇಡಿಯಾಗಿ ಒಪ್ಪಿಸಬಹುದು, ತನ್ನ ಚಿಂತೆಗಳನ್ನು ಅದರತ್ತ ದಾಟಿಸಬಹುದು ಮತ್ತು ತನ್ನ ಜೀವನಕ್ಕೆ ಮಾರ್ಗದರ್ಶನ ಮಾಡುವ ಕಾಳಜಿಯನ್ನು, ಪ್ರತಿಯೊಂದನ್ನು ಸಂಘಟಿಸುವುದನ್ನು ಅದಕ್ಕೆ ಬಿಟ್ಟುಕೊಡಬಹುದು.

ಮನುಷ್ಯನಲ್ಲಿ ಅವಶ್ಯವಾದ ಜ್ಞಾನವಿಲ್ಲದೆ ಇದ್ದಾಗ ಅವನು ಸಮಸ್ಯೆಯನ್ನು ಪರಿಹರಿಸುವುದು ಹೇಗೆ ಸಾಧ್ಯವಾದೀತು? ದುರ್ದೈವದ ವಿಷಯವೆಂದರೆ ಮನುಷ್ಯ ತನ್ನ ಜೀವನದ ಸಮಸ್ಯೆಗಳನ್ನು ತಾನೇ ಪರಿಹರಿಸಬೇಕಾಗುತ್ತದೆಂದು ನಂಬುತ್ತಾನೆ. ಅದನ್ನು ಕೈಕೊಳ್ಳುವುದಕ್ಕೆ ಅವಶ್ಯವಾಗಿರುವ ಜ್ಞಾನ ಅವನಲ್ಲಿ ಇರುವುದಿಲ್ಲ. ಅವನ ಎಲ್ಲ ತೊಂದರೆಗಳಿಗೆ ಅದೇ ಮೂಲ, ಅಲ್ಲಿಂದಲೇ ಅವು ಉದ್ಭವಿಸುತ್ತವೆ. – ಆ ನಿರಂತರ ಪ್ರಶ್ನೆ: "ನಾನು ಮಾಡಬೇಕಾದುದೇನು?", ಅದನ್ನನುಸರಿಸಿ ಇನ್ನೂ ಹೆಚ್ಚು ತೀಕ್ಷ್ಣವಾದ ಪ್ರಶ್ನೆ: "ಏನು ಸಂಭವಿಸಲಿದೆ?" ಎಂಬುದು. ಹೆಚ್ಚು ಕಡಿಮೆ ಅದೇಕಾಲಕ್ಕೆ ಅದಕ್ಕೆ ಉತ್ತರ ಕೊಡಲು ಅಸಮರ್ಥತೆ ಇರುತ್ತದೆ.

ಆ ಕಾರಣದಿಂದಾಗಿಯೇ ಎಲ್ಲ ಆಧ್ಯಾತ್ಮಿಕ ಶಿಸ್ತುಪಾಲನೆಗಳು ಉಚ್ಚತರ ತತ್ವಕ್ಕೆ ಎಲ್ಲ ಜವಾಬ್ದಾರಿಯನ್ನು ಒಪ್ಪಿಸಿಕೊಡುವ ಹಾಗೂ ಅದನ್ನೇ ನೆಚ್ಚಿಕೊಂಡಿರುವ ಆವಶ್ಯಕತೆಯೊಂದಿಗೆ ಪ್ರಾರಂಭಿಸುತ್ತವೆ, ಹಾಗಿರದೆ ಇದ್ದರೆ ಶಾಂತಿ ಅಸಾಧ್ಯವಾಗುತ್ತದೆ.

ಮತ್ತು ಆದಾಗ್ಯೂ ಮನುಷ್ಯನಿಗೆ ಪ್ರಜ್ಞೆಯನ್ನು ಕೊಡಲಾಗಿದೆ, ಅದರಿಂದಾಗಿ ಅವನು ಪ್ರಗತಿ ಸಾಧಿಸಬಹುದು, ತನಗೆ ತಿಳಿದಿರದೆ ಇದ್ದುದನ್ನು ಶೋಧಿಸಬಹುದು, ಅವನಿನ್ನೂ ಆಗಿರದೆ ಇದ್ದುದನ್ನು ಸಾಧಿಸುವತ್ತ ಅಭಿವೃದ್ಧಿ ಹೊಂದಬಹುದು. ಅದರಿಂದಾಗಿ ಅಚಲ, ಸ್ಥಿರ ಶಾಂತಿಗಿಂತ ಉಚ್ಚತರ ಸ್ಥಿತಿ ಇದೆ ಎಂದು ಹೇಳಬಹುದು. ಪ್ರಗತಿಗಾಗಿ ಸಂಕಲ್ಪವನ್ನು ಇಟ್ಟುಕೊಳ್ಳುವುದು, ಎಲ್ಲ ತಳಮಳವನ್ನು ಪರಿಣಾಮಗಳಿಗಾಗಿ ಇರುವ ಕಾಳಜಿಯನ್ನು ತೊಡೆದುಹಾಕಿ ಪ್ರಗತಿಗಾಗಿರುವ ಪ್ರಯತ್ನ ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ಇದೆಲ್ಲದಕ್ಕಾಗಿ ಸಾಕಷ್ಟು ಇಡಿಯಾದ ವಿಶ್ವಾಸ ಹೊಂದಿರಬೇಕು. ಇದು 'ನೈಷ್ಕರ್ಮ ಸಿದ್ಧಾಂತ' ಎಂದು ಕರೆಯಲಾಗುವಂತಹ ವಿಧಾನಗಳಿಗಿಂತ ಒಂದು ಹೆಜ್ಜೆ ಮುಂದಿದೆ. ಅಂತಹ ಸಿದ್ಧಾಂತಗಳು ಎಲ್ಲ ಚಟುವಟಿಕೆಗಳನ್ನು ನಿರಾಕರಿಸುವುದರ ಮೇಲೆ, ಅಚಂಚಲತೆಯಲ್ಲಿ ಹಾಗೂ ಆಂತರಿಕ ನಿಶ್ಚಲನೀರವತೆಯಲ್ಲಿ ಮುಳುಗಿ ಹೋಗುವುದರ ಮೇಲೆ ಸ್ಥಾಪಿತವಾಗಿವೆ. ಅವು ಎಲ್ಲ ಜೀವನವನ್ನು ಕೈಬಿಡುತ್ತವೆ, ಏಕೆಂದರೆ ಶಾಂತಿಯಿಲ್ಲದೆ ಮನುಷ್ಯ ಯಾವ ಬಗೆಯ ಆಂತರಿಕ ಸಿದ್ಧಿಯನ್ನು ಪಡೆಯಲಾರ ಮತ್ತು ಬಹಳ ಸ್ವಾಭಾವಿಕವಾಗಿ ಬಾಹ್ಯ ಚಟುವಟಿಕೆಗಳಲ್ಲಿ ಜೀವಿಸುತ್ತಿರುವವರೆಗೆ ಮನುಷ್ಯ ಶಾಂತಿಯನ್ನು ಪಡೆಯಲಾರ ಎಂದು ಅವನು ಯೋಚಿಸಿದ. ತಳಮಳದ ಸ್ಥಿತಿಯಲ್ಲಿ ಸಮಸ್ಯೆಗಳಿರುತ್ತವೆ ಮತ್ತು ಆವುಗಳಿಗೆ



ಪರಿಹಾರ ಕಂಡುಕೊಳ್ಳಲಾಗುವುದಿಲ್ಲ, ಏಕೆಂದರೆ ಪರಿಹಾರ ಕಂಡುಕೊಳ್ಳುವ ಜ್ಞಾನ ಮನುಷ್ಯನಲ್ಲಿರುವುದಿಲ್ಲ.

ಸಮಸ್ಯೆಯನ್ನು ಎದುರಿಸುವುದು ಮುಂದಿನ ಹೆಜ್ಜೆ, ಆದರೆ ಅದನ್ನು ಪರಮೋಚ್ಚ ದೈವೀ ಸಾಮರ್ಥ್ಯದಲ್ಲಿ ಪರಿಪೂರ್ಣ ವಿಶ್ವಾಸವಿರಿಸಿದ ಸ್ಥಿರತೆ ಹಾಗೂ ನಿಶ್ಚಿತತೆಗಳಿಂದ ಕೈಕೊಳ್ಳಬೇಕು. ಆ ಸಾಮರ್ಥ್ಯ ತಿಳಿದಿರುತ್ತದೆ ಮತ್ತು ನೀವು ಕಾರ್ಯ ಮಾಡುವಂತೆ ಮಾಡುತ್ತದೆ. ಮತ್ತು ಆಗ ಕಾರ್ಯವನ್ನು ಕೈಬಿಡುವುದರ ಬದಲಾಗಿ ಮನುಷ್ಯ ಬಲವತ್ತರವಾದ, ಕ್ರಿಯಾತ್ಮಕವಾದ ಉಚ್ಚತರ ಶಾಂತಿಯಿಂದ ಕಾರ್ಯ ಕೈಕೊಳ್ಳಬಹುದು.

ಇದನ್ನು ಜೀವನದಲ್ಲಿ ದೈವೀ ಮಧ್ಯಸ್ಥಿಕೆಯ ಹೊಸ ಮುಖ, ಅಸ್ತಿತ್ವದಲ್ಲಿರುವ ದೈವೀ ಶಕ್ತಿಗಳ ಹೊಸ ಮುಖ, ಆಧ್ಯಾತ್ಮಿಕ ಸಿದ್ಧಿಯ ಹೊಸ ಮುಖ ಎಂದು ಕರೆಯಬಹುದು.

**(9/303–05)** **– ಶ್ರೀಮಾತೆ**

*

## ವೇದನೆ ಏಕಿದೆ?

ಇತ್ತೀಚೆಗೆ ಬಹಳ ದಿನಗಳ ಕಾಲ, ಎಂದರೆ ದಿನಗಟ್ಟಲೆ, ಒಂದು ತೀಕ್ಷ್ಣ, ಗಾಢ, ಬಹಳ ಸ್ಪಷ್ಟ ಗ್ರಹಿಕೆ ಇತ್ತು, ಅದೆಂದರೆ ದೈವೀ ಶಕ್ತಿಯ ಕಾರ್ಯ ನಾವು ಬಾಹ್ಯದಲ್ಲಿ "ವೇದನೆ" ಎಂದು ಕರೆಯುವ ರೂಪ ತಾಳಿತು ಎಂಬುದು. ಏಕೆಂದರೆ ಭೌತ ದ್ರವ್ಯವನ್ನು ಅದರ ಜಡತ್ವದಿಂದ ಹೊರಗೆಳೆಯುವುದಕ್ಕಾಗಿ ಇರುವ ಕಂಪನ ಅದೊಂದೇ ಬಗೆಯದಾಗಿದೆ.

ಪರಮೋಚ್ಚ ಶಾಂತಿ ಹಾಗೂ ಸ್ಥಿರತೆ ಇವು ಜಡತ್ವ ಮತ್ತು ತಮಸ್ಸುಗಳಾಗಿ ವಿಕೃತಗೊಂಡಿವೆ ಮತ್ತು ವಿಕಾರಗೊಂಡಿವೆ ಮತ್ತು ನಿಖರವಾಗಿ ಏಕೆಂದರೆ ಇದೇ ನಿಜವಾದ ಶಾಂತಿ ಹಾಗೂ ಸ್ಥಿರತೆಗಳ ವಿರೂಪಗೊಳ್ಳುವಿಕೆಯಾಗಿದೆ, ಅವು ಬದಲಾಗಬೇಕೆಂಬುದಕ್ಕೆ ಬೇರೆ ಕಾರಣವಿರಲಿಲ್ಲ! ಎಚ್ಚತ್ತುಕೊಳ್ಳುವ ಒಂದು ಬಗೆಯ ಕಂಪನ – ಮರು ಎಚ್ಚತ್ತುಕೊಳ್ಳುವಿಕೆ – ತಮಸ್ಸಿನಿಂದ ಹೊರಬರಲು ಅವಶ್ಯವಾಗಿತ್ತು. ಅದು ನೇರವಾಗಿ ತಮಸ್ಸಿನಿಂದ ಶಾಂತಿಯತ್ತ ಸಾಗಿ ಹೋಗಲಾರದಾಗಿತ್ತು. ತಮಸ್ಸನ್ನು ಅಲುಗಾಡಿಸಲು ಏನೋ ಒಂದು ಬೇಕಾಗಿತ್ತು, ಅದು ಬಾಹ್ಯದಲ್ಲಿ ವೇದನೆಯ ರೂಪ ತಾಳಿದೆ.

ನಾನಿಲ್ಲಿ ಭೌತಿಕ ವೇದನೆಯ ಬಗ್ಗೆ ಮಾತನಾಡುತ್ತಿದ್ದೇನೆ, ಏಕೆಂದರೆ ಮಾನಸಿಕ, ಪ್ರಾಣಿಕ ಹಾಗೂ ಭಾವನಾತ್ಮಕ ವೇದನೆಗಳು ಮನಸ್ಸು ತಪ್ಪಾಗಿ ಕಾರ್ಯ ಮಾಡುವುದರಿಂದ ಉಂಟಾಗುತ್ತವೆ. ಮತ್ತು ಇವೆಲ್ಲವುಗಳನ್ನು ಸರಳವಾಗಿ ಒಟ್ಟಿಗೆ ಮಿಥ್ಯೆ ಎಂದು ವರ್ಗೀಕರಣ ಮಾಡಬಹುದು, ಅಷ್ಟೆ. ಆದರೆ ಭೌತಿಕ ವೇದನೆ ನನಗೆ ಮಗುವೊಂದನ್ನು ಥಳಿಸುತ್ತಿರುವ ಭಾವನೆ ತಂದುಕೊಡುತ್ತದೆ. ಏಕೆಂದರೆ ಇಲ್ಲಿ, ಭೌತಿಕದಲ್ಲಿ ಮಿಥ್ಯೆ ಅಜ್ಞಾನವಾಗಿ ಪರಿಣಮಿಸಿದೆ, ಎಂದರೆ ಅಲ್ಲಿ ದುರುದ್ದೇಶವಿಲ್ಲ – ಭೌತ ದ್ರವ್ಯದಲ್ಲಿ ದುರುದ್ದೇಶವಿಲ್ಲ, ಎಲ್ಲವೂ ಕೇವಲ ಜಡತ್ವವಾಗಿದೆ ಮತ್ತು ಅಜ್ಞಾನವಾಗಿದೆ, ದೈವೀ ಸತ್ಯದ ಬಗೆಗಿನ ಸಂಪೂರ್ಣ ಅಜ್ಞಾನ, ದೈವೀ ಮೂಲದ ಬಗೆಗಿನ ಅಜ್ಞಾನ, ದೈವೀ ಸಾಧ್ಯತೆಯ ಬಗೆಗಿನ ಅಜ್ಞಾನ, ಭೌತಿಕವಾಗಿ ವೇದನೆಗೆ ಒಳಗಾಗದಿರುವಂತೆ ಏನು ಮಾಡಬೇಕು ಎಂಬುದರ ಬಗೆಗಿನ ಅಜ್ಞಾನ. ಈ ಅಜ್ಞಾನ ಎಲ್ಲ ಜೀವಕೋಶಗಳಲ್ಲಿದೆ. ಅನುಭವ ಮಾತ್ರ ಎಂದರೆ ಆರಂಭ ಸ್ಥಿತಿಯ ಪ್ರಜ್ಞೆ ವೇದನೆಯಾಗಿ ರೂಪಾಂತರಗೊಂಡಿರುವ ಅನುಭವ ಎಚ್ಚರ ತಂದುಕೊಡಬಹುದು, ತಿಳಿದುಕೊಳ್ಳುವ ಹಾಗೂ ಚಿಕಿತ್ಸೆ ನೀಡುವ ಮತ್ತು ತನ್ನನ್ನು ಪರಿವರ್ತಿಸುವುದಕ್ಕಾಗಿ ಇರುವ ಅಭೀಪ್ಸೆಯ ಆವಶ್ಯಕತೆಯನ್ನು ಮುಂದಿರಿಸಬಹುದು.

ಅದೊಂದು ನಿಶ್ಚಿತತೆಯಾಗಿದೆ, ಏಕೆಂದರೆ ಎಲ್ಲ ಜೀವಕೋಶಗಳಲ್ಲಿ ಅಭೀಪ್ಸೆ ಜನ್ಮ ತಾಳಿದೆ, ಅದು ಹೆಚ್ಚು ಹೆಚ್ಚಾಗಿ ಗಾಢವಾಗುತ್ತಿದೆ, ಅದಕ್ಕಾಗುವ ಪ್ರತಿರೋಧವನ್ನು ಕಂಡು ಆಶ್ಚರ್ಯಪಡುತ್ತಿದೆ, ಕಾರ್ಯದಲ್ಲಿ ಏನಾದರೂ ತಪ್ಪಾದರೆ ಎಂದರೆ ನಯೋಪಾಯದ್ದು, ಸ್ವಯಂಪ್ರೇರಿತವಾದದ್ದು, ಸ್ವಾಭಾವಿಕವಾದದ್ದು ಆಗುವುದರ ಬದಲಾಗಿ ಕಾರ್ಯ ದುಃಖದಾಯಕ ಪ್ರಯತ್ನದ್ದು, ದುರುದ್ದೇಶವಿರುವ ತೋರಿಕೆಯದು ಆದಾಗ ಅದು ಅರ್ಥಮಾಡಿಕೊಳ್ಳದೆ ಇರುವ ಸಂಕೋಚ. ಆ ಕ್ಷಣದಲ್ಲಿ ಅಭೀಪ್ಸೆಯ ಹಾಗೂ ಕರೆಕೊಡುವುದರ ಗಾಢತೆ ಹತ್ತುಪಟ್ಟು ಹೆಚ್ಚಾಗುತ್ತದೆ, ಸತತವಾಗಿ ಇರುತ್ತದೆ ಎಂಬುದನ್ನು ಜೀವಕೋಶಗಳು ಅವಲೋಕಿಸಿವೆ. ಇರುವ ತೊಂದರೆ ಎಂದರೆ ಆ ಗಾಢತೆಯಲ್ಲಿ ಉಳಿದುಕೊಳ್ಳುವುದಾಗಿದೆ. ಸಾಧಾರಣವಾಗಿ ಎಲ್ಲವೂ ಹಿಂದೆ ಸರಿದುಕೊಂಡುಬಿಡುತ್ತದೆ, ನಿದ್ರಾವಸ್ಥೆಯಲ್ಲಿ ಬೀಳುತ್ತದೆಂದು ನಾನು ಹೇಳುವುದಿಲ್ಲ, ಆದರೆ ಅದು ಒಂದು ಬಗೆಯ ವಿರಾಮದ ಸ್ಥಿತಿ, ನೀವು ವಿಷಯಗಳನ್ನು ಹಗುರಾಗಿ ತೆಗೆದುಕೊಳ್ಳುತ್ತೀರಿ ಮತ್ತು ಆಂತರಿಕ ಅವ್ಯವಸ್ಥೆ ದುಃಖದಾಯಕವಾದಾಗ ಮಾತ್ರ ಗಾಢತೆ ವೃದ್ಧಿಸುತ್ತದೆ, ಸತತ ಉಳಿದುಕೊಳ್ಳುತ್ತದೆ.



ಹಲವಾರು ಗಂಟೆಗಳ ಕಾಲ, ಕರೆಕೊಡುವಿಕೆ, ಅಭೀಪ್ಸೆ, ಭಗವಂತನೊಡನೆ ಏಕತೆ ಪಡೆಯುವ ಸಂಕಲ್ಪ, ಭಗವಂತನೇ ಅಗಿಬಿಡುವಿಕೆ ಇವೆಲ್ಲವನ್ನು ಬಲ ಕುಂದಿಸದೆ ಗರಿಷ್ಠಮಟ್ಟದಲ್ಲಿ ಕಾಯ್ದುಕೊಂಡುಹೋಗುವಂತಾಗುತ್ತದೆ. ಏಕೆ? ಏಕೆಂದರೆ ಬಾಹ್ಯದಲ್ಲಿ ಭೌತಿಕ ಅಸ್ತವ್ಯಸ್ತತೆ ಎಂದು ಕರೆಯಲಾದ ವೇದನೆ ಇದ್ದಿತು. ಹಾಗಿರದಿದ್ದರೆ, ವೇದನೆ ಇಲ್ಲದೆ ಹೋದಾಗ ಕಾಲಕಾಲಕ್ಕೆ ಮನುಷ್ಯ ಮೇಲೇರಿ ಹೋಗುತ್ತಾನೆ ಮತ್ತೆ ಕೆಳಗೆ ಬಲಕುಂದಿದ ಸ್ಥಿತಿಗೆ ಬರುತ್ತಾನೆ, ಮತ್ತು ಇನ್ನೊಂದು ಸಮಯದಲ್ಲಿ ಮನುಷ್ಯ ಮತ್ತೆ ಮೇಲೇರಿ ಹೋಗುತ್ತಾನೆ. ಅದಕ್ಕೆ ಕೊನೆಯೆಂಬುದೇ ಇಲ್ಲ. ಅದು ಶಾಶ್ವತವಾಗಿ ಉಳಿದುಕೊಂಡುಬಿಡುತ್ತದೆ. ವಿಷಯಗಳು ತೀವ್ರಗತಿ–ಯಿಂದ ಸಾಗಿಹೋಗಬೇಕು ಎಂದು ನಾವು ಬಯಸಿದರೆ (ನಮ್ಮ ಜೀವನದ ಛಂದೋಗತಿಗೆ ಅನುಗುಣವಾದ ಸಾಪೇಕ್ಷವಾದ ತೀವ್ರಗತಿ) ಈ ಚಾಟಿಯ ಏಟಿನ ರುಚಿ ಅವಶ್ಯವಾಗುತ್ತದೆ. ನನಗೆ ಅದರ ಬಗ್ಗೆ ಮನವರಿಕೆಯಾಗಿದೆ, ಏಕೆಂದರೆ ನೀವು ನಿಮ್ಮ ಅಂತರಂಗದ ಸತ್ತೆಯ ಒಳಗೆ ಇರತೊಡಗಿದ ಕೂಡಲೆ (ನಿಮ್ಮನ್ನೇ ಕುರಿತು) ಅದನ್ನು ತಿರಸ್ಕಾರ ದೃಷ್ಟಿಯಿಂದ ನೋಡುತ್ತೀರಿ.

ಆದರೆ ಆಗ, ಒಮ್ಮೆಗೆ ಈ ನಿಜವಾದ ದೈವೀ ಪ್ರೇಮದ ಕರುಣೆ ಇದ್ದಾಗ ಮತ್ತು ಭಯಾನಕವಾಗಿ ತೋರಿಬರುವ ಈ ಎಲ್ಲ ಅಪಸಾಮಾನ್ಯ, ಅಸಂಗತ ವಿಷಯಗಳನ್ನು ಎಲ್ಲ ಸತ್ತೆಗಳು ಹಾಗೂ ಎಲ್ಲ ವಿಷಯಗಳ ಮೇಲೂ ಇರುವ ಈ ಭವ್ಯ ವೇದನೆಯನ್ನು ನೋಡಿದಾಗ ಈ ಭೌತಿಕ ಸತ್ತೆಯಲ್ಲಿ ಸಾಂತ್ವನಗೊಳಿಸಲು ಚಿಕಿತ್ಸೆ ನೀಡಲು, ಅದನ್ನು ತೆಗೆದುಹಾಕಲು ಅಭೀಪ್ಸೆ ಜನ್ಮ ತಾಳುತ್ತದೆ. ಆ ದೈವೀ ಪ್ರೇಮದಲ್ಲಿ, ಅದರ ದೈವೀ ಮೂಲದಲ್ಲಿ ಏನೋ ಒಂದು ದೈವೀ ಮಧ್ಯಸ್ಥಿಕೆಯಾಗಿ ಸತತ ರೂಪಾಂತರಗೊಳ್ಳುತ್ತದೆ: ಶಕ್ತಿ, ಮಾಧುರ್ಯ, ಸಮಾಧಾನದ ಕಂಪನವಿರುವ ಏನೋ ಒಂದು ಇವೆಲ್ಲ ಎಲ್ಲೆಡೆಯಲ್ಲಿ ಹರಡಿಕೊಳ್ಳತ್ತವೆ, ಆದರೆ ಅವುಗಳನ್ನು ಜ್ಞಾನೋದಯ ಪಡೆದ ಪ್ರಜ್ಞೆ ನಿರ್ದೇಶಿಸಬಲ್ಲದು, ಕೆಲವೊಂದು ಬಿಂದುಗಳ ಮೇಲೆ ಏಕಾಗ್ರಗೊಳಿಸಬಲ್ಲದು. ಮತ್ತು ಅಲ್ಲಿಯೇ ನಾನು ಯೋಚನೆಯ ನಿಜವಾದ ಉಪಯೋಗವನ್ನು ಮನುಷ್ಯ ಹೇಗೆ ಮಾಡಬಲ್ಲ ಎಂಬುದನ್ನು ನೋಡಿದೆ. ಯೋಚನೆ ಈ ಕಂಪನವನ್ನು ಒಂದು ಸ್ಥಳದಿಂದ ಅವಶ್ಯವಿರುವ ಇನ್ನೊಂದು ಸ್ಥಳಕ್ಕೆ ಒಯ್ಯುವ ಒಂದು ಬಗೆಯ ವಾಹಿನಿಯ ರೂಪದಲ್ಲಿ ಉಪಯುಕ್ತವಾಗುತ್ತದೆ. ಈ ಶಕ್ತಿ ಹಾಗೂ ಈ ಕಂಪನ ಸ್ಥಿರಗೊಂಡ ರೀತಿಯಲ್ಲಿ ಜಗತ್ತಿನ ಮೇಲಿವೆ, ತಮ್ಮನ್ನು ಸ್ವೀಕರಿಸಲು ಒತ್ತಾಯ ತರುತ್ತವೆ, ಆದರೆ ಅದು ಅವೈಯಕ್ತಿಕ ಕ್ರಿಯೆ. ಆದರೆ

ಜ್ಞಾನೋದಯ ಪಡೆದ, ಸಮರ್ಪಣ ಮಾಡಿಕೊಂಡ, ಕಾರ್ಯಗಳನ್ನು ಪ್ರಾರಂಭಿಸದೆ ಕೇವಲ ಉಪಕರಣರೂಪದ್ದಾಗಿರುವ, ಉಚ್ಚತರ ಪ್ರಜ್ಞೆಯಿಂದ ಚಲನೆಗೊಳಗಾಗುವುದರಲ್ಲಿ ಮಾತ್ರ ಸಮಾಧಾನ ಕಂಡುಕೊಳ್ಳುವ ಯೋಚನೆಯು ಸಂಪರ್ಕ, ಸಂಬಂಧಗಳನ್ನು ಸ್ಥಾಪಿಸಲು, ಈ ಅವೈಯಕ್ತಿಕ ದೈವೀಶಕ್ತಿ ಅವಶ್ಯವಿದ್ದಲ್ಲಿ ನಿಶ್ಚಿತ ಬಿಂದುಗಳಮೇಲೆ ಕಾರ್ಯ ಕೈಕೊಳ್ಳಲು ಶಕ್ತವಾಗುವಂತೆ ಮಾಡಲು 'ಮಧ್ಯವರ್ತಿ'ಯೆಂದು ಸೇವೆ ಸಲ್ಲಿಸುತ್ತದೆ.

**– ಶ್ರೀಮಾತೆ**

*

## ವೇದನೆಗೆ ಚಿಕಿತ್ಸೆ ಒದಗಿಸುವುದು ಹೇಗೆ?

ದುಷ್ಟವಾದದ್ದು ಅದರ ನಿವಾರಣೆಯ ಉಪಾಯವನ್ನು ಯಾವಾಗಲೂ ತನ್ನೊಡನೆ ಕೊಂಡೊಯ್ಯುತ್ತದೆ ಎಂದು ಪರಿಪೂರ್ಣ ರೀತಿಯಲ್ಲಿ ಹೇಳಬಹುದು. ಯಾವುದೇ ವೇದನೆಯ ಚಿಕಿತ್ಸೆ ವೇದನೆಯೊಂದಿಗೆ ಸಹ–ಅಸ್ತಿತ್ವದಲ್ಲಿರುತ್ತದೆಂದು, ನಿಜವಾಗಿ ಹೇಳಬಹುದು. ಸಾಮಾನ್ಯವಾಗಿ ಯೋಚಿಸುವ ರೀತಿಯಲ್ಲಿ ದುಷ್ಟವಾದದ್ದು ನಿರುಪಯುಕ್ತ ಮತ್ತು ಮೂರ್ಖತನದ್ದು ಎಂದು ನೋಡುವುದರ ಬದಲಾಗಿ ವೇದನೆ ಅವಶ್ಯವಾಗಿರುವಂತೆ ಮಾಡಿರುವ ಪ್ರಗತಿ, ಉತ್ಕ್ರಾಂತಿ – ಅದು ವೇದನೆಯ ಉತ್ಪಾದಕ, ವೇದನೆ ಅಸ್ತಿತ್ವದಲ್ಲಿರುವುದಕ್ಕಾಗಿ ಕಾರಣೀಭೂತವಾದದ್ದು – ಉದ್ದೇಶಿತ ಪರಿಣಾಮವನ್ನು ಸಿದ್ಧಿಸಿಕೊಳ್ಳುತ್ತದೆ ಎಂಬುದನ್ನು ನೋಡುತ್ತೀರಿ, ಅದೇ ಕಾಲಕ್ಕೆ ತಮ್ಮನ್ನು ತೆರೆದಿರಿಸಿಕೊಳ್ಳಬಲ್ಲವರಿಗೆ, ಸ್ವೀಕರಿಸಬಲ್ಲವರಿಗೆ ಉಪಶಮನವನ್ನು ನೀಡಲಾಗುತ್ತದೆ. ಪ್ರಗತಿಯ ಸಾಧನವೆಂದು ವೇದನೆ, ಪ್ರಗತಿ ಮತ್ತು ವೇದನೆಗೆ ಚಿಕಿತ್ಸೆ ಈ ಮೂರೂ ವಿಷಯಗಳು ಒಟ್ಟಿಗೆ ಅಸ್ತಿತ್ವದಲ್ಲಿರುತ್ತವೆ, ಏಕಕಾಲಿಕವಾಗಿರುತ್ತವೆ, ಅಂದರೆ ಅವು ಒಂದರ ನಂತರ ಒಂದರಂತೆ ಬರುವುದಿಲ್ಲ, ಅವು ಅಲ್ಲಿ ಒಂದೇ ವೇಳೆಗೆ ಇರುತ್ತವೆ.

ಪರಿವರ್ತನೆಗೊಳಪಡಿಸುವ ಕ್ರಿಯೆ ವೇದನೆಯನ್ನು ಸೃಷ್ಟಿಸುವ ಕ್ಷಣದಲ್ಲಿ ಅದರಲ್ಲಿ ಅವಶ್ಯವಾದ ಅಭೀಪ್ಸೆಯ ವೇದನೆ ಮತ್ತು ತೆರೆದಿರಿಸಿಕೊಳ್ಳುವಿಕೆ ಇರುತ್ತವೆ, ಅದೇ ಕಾಲಕ್ಕೆ (ನಿವಾರಣೆಯ) ಉಪಾಯವನ್ನೂ ಜೊತೆಗಿರಿಸಿಕೊಳ್ಳಲಾಗಿರುತ್ತದೆ ಮತ್ತು ಪರಿಣಾಮ ಇಡಿಯಾದ, ಸಂಪೂರ್ಣ ಪರಿವರ್ತನೆ: ದೊರಕಿಸಲು



ಅವಶ್ಯವಾದ ಕ್ರಿಯೆಯೊಂದಿಗೆ ಪರಿವರ್ತನೆ ಮತ್ತು ಅದೇ ಕಾಲಕ್ಕೆ ಪ್ರತಿರೋಧದಿಂದ ಉತ್ಪನ್ನವಾದ ಮಿಥ್ಯಾರೂಪದ ಸಂವೇದನೆಗೆ ಚಿಕಿತ್ಸೆ ಇರುತ್ತವೆ. ಮತ್ತು ವೇದನೆಯ ಸ್ಥಾನದಲ್ಲಿ, ಪೃಥ್ವಿಯಮೇಲೆ ಪರಿಚಿತವಲ್ಲದ ಏನೋ ಒಂದು ಬರುತ್ತದೆ, ಆದರೆ ಅದು ಸಂತೋಷ, ಸ್ವಾಸ್ಥ್ಯ, ವಿಶ್ವಾಸ, ರಕ್ಷಣೆ ಇವುಗಳಿಗೆ ಹತ್ತಿರವಾದದ್ದಾಗಿರುತ್ತದೆ. ಅದು ಆಚೆಗಿರುವುದರ ಸಂವೇದನೆ, ಪರಿಪೂರ್ಣ ಶಾಂತಿಯಲ್ಲಿರುವಂತಹದು ಮತ್ತು ಶಾಶ್ವತವಾಗಿ ಇರಬಲ್ಲ ವಿಷಯ, ಸ್ಪಷ್ಟವಾಗಿ, ಅದೊಂದೇ ಆಗಿರುತ್ತದೆ.

ಈ ವಿಶ್ಲೇಷಣೆ ಮನುಷ್ಯ ಆನಂದದಲ್ಲಿ "ಅಂತರ್ಗತವಾದದ್ದು" ಎಂದು ಕರೆಯಬಹುದಾದುದನ್ನು ಬಹಳ ಅಪರಿಪೂರ್ಣ ರೀತಿಯಲ್ಲಿ ಅಭಿವ್ಯಕ್ತಪಡಿಸುತ್ತದೆ.

ಎಲ್ಲ ಯುಗಗಳಲ್ಲಿ, ಭಾಗಶಃ ಮತ್ತು ಬಹಳ ಕ್ಷಣಿಕ ಎನ್ನುವ ರೀತಿಯಲ್ಲಿ ಭಾವನೆಗೆ ತಂದುಕೊಂಡ, ಅನುಭವಕ್ಕೆ ಬಂದ ಏನೋ ಒಂದು ಅದಾಗಿದೆ, ಆದರೆ ಇದೀಗ ಅದು ಪೃಥ್ವಿಯಮೇಲೆ ಏಕಾಗ್ರಗೊಳ್ಳಲು, ಬಹುಮಟ್ಟಿಗೆ ತನಗೆ ಮೂರ್ತರೂಪ ಕೊಟ್ಟುಕೊಳ್ಳಲು ಪ್ರಾರಂಭಿಸಿದೆ ಎಂದು ನನಗನಿಸುತ್ತದೆ. ಆದರೆ ಜೀವಕೋಶಗಳ ರೂಪದಲ್ಲಿರುವ ಭೌತದ್ರವ್ಯಕ್ಕೆ ಭಯ ಇಲ್ಲವೆ ತಳಮಳ ಇರುವುದೆಂದು ಹೇಳಲಾಗದು, ಆದರೆ ಹೊಸ ಕಂಪನಗಳನ್ನು ಕುರಿತು ಒಂದು ಬಗೆಯ ಆತಂಕವಿರುತ್ತದೆ ಮತ್ತು ಈ ಆತಂಕ ಸ್ವಾಭಾವಿಕವಾಗಿ ಜೀವಕೋಶಗಳಿಂದ ಸ್ವೀಕೃತಿಯನ್ನು ತೆಗೆದುಹಾಕುತ್ತದೆ, ಅಸೌಖ್ಯದ ತೋರಿಕೆಯನ್ನು ಧಾರಣ ಮಾಡುತ್ತದೆ, ಅದು ವೇದನೆಯಲ್ಲ, ಅಸೌಖ್ಯ. ಹಾಗಿದ್ದಾಗ್ಯೂ ಈ ಅಸೌಖ್ಯಕ್ಕೆ ಅಭೀಪ್ಸೆಯ, ಇಡಿಯಾದ ಸಮರ್ಪಣ ಮಾಡಿಕೊಳ್ಳುವುದಕ್ಕೆ ಸಂಕಲ್ಪದ, ಇಡಿಯಾದ ಸಮರ್ಪಣ ಮಾಡಿಕೊಳ್ಳುವ ಕ್ರಿಯೆಯ ಮೂಲಕ ಪ್ರತಿಭಾರ ಒಡ್ಡಿದಾಗ ಈ ಬಗೆಯ ಅಸೌಖ್ಯ ಮಾಯವಾಗಿ ಪರಮೋಚ್ಚ ಒಳ್ಳೆಯ ಸ್ಥಿತಿಯಾಗುತ್ತದೆ....

ಇದೀಗ ನಾನು ಹೇಳುತ್ತಿದ್ದ ವಿಷಯಕ್ಕೆ ಹಿಂತಿರುಗಿ ಬಂದು ಮತ್ತೆ ಹೇಳುವುದಾದರೆ ಈ ದೈವೀ ಶಕ್ತಿಯ ಬಗ್ಗೆ ಅರಿವುಳ್ಳವರಾದಾಗ – ಈ ದೈವೀ ಶಕ್ತಿ ಅದರ ಸಾರಭೂತ ನೈಜತೆಯಲ್ಲಿ ದೈವೀ ಕರುಣೆಯಾಗಿದೆ – ಮತ್ತು ಪ್ರಜ್ಞಾಪೂರ್ಣ ವ್ಯಕ್ತಿಯಲ್ಲಿ ಹೇಗೆ ಕಾರ್ಯ ಮಾಡುತ್ತದೆ ಎಂಬುದನ್ನು ನೋಡಿದಾಗ ಮನುಷ್ಯ ಸಮಸ್ಯೆಯ ಪರಿಹಾರಕ್ಕೆ ಬೀಗದ ಕೈ ದೊರಕಿಸುತ್ತಾನೆ.

**(11/41–44)** **– ಶ್ರೀಮಾತೆ**

*

## ವೇದನೆ ಯಾವುದರತ್ತ ಕೊಂಡೊಯ್ಯುತ್ತಿದೆಯೋ ಅದರ ರಹಸ್ಯ

ಈ ನೋವು ನಮ್ಮನ್ನು ಯಾವುದರತ್ತ ಕೊಂಡೊಯ್ಯುತ್ತಿದೆಯೋ ಅದರ ರಹಸ್ಯವೇನು ಎಂದು, ಹೆಚ್ಚು ಸ್ವಾಭಾವಿಕವಾಗಿ, ನಾವು ನಮ್ಮನ್ನೇ ಕೇಳಿಕೊಳ್ಳುತ್ತೇವೆ. ಮೇಲ್ಮೈಯ ಹಾಗೂ ಅಪರಿಪೂರ್ಣ ತಿಳಿವಳಿಕೆಗೆ, ಆತ್ಮವು ಅರಸುತ್ತಿರುವುದು ನೋವೇ ಎಂದು ತಿಳಿದುಬರಬಹುದು. ಅದು ಆ ಬಗೆಯದಲ್ಲವೇ ಅಲ್ಲ. ಆತ್ಮದ ಯಥಾರ್ಥ ಸ್ವಭಾವವು ಸತತ ಇರುವ, ಬದಲಾಗದ, ಷರತ್ತಿಗೊಳಗಾಗದ, ದಿವ್ಯೋತ್ಸಾಹದ ದಿವ್ಯಾನಂದದ್ದಾಗಿದೆ. ಆದರೆ ಮನುಷ್ಯ ವೇದನೆಯನ್ನು ಧೈರ್ಯದಿಂದ, ತಾಳ್ಮೆಯಿಂದ, ದೈವೀಕೃಪೆಯಲ್ಲಿ ಅಲುಗಾಡದ ನಂಬಿಕೆಯಿಂದ ಎದುರಿಸಬಲ್ಲವನಾದರೆ, ವೇದನೆ ಬಂದಾಗ ಅದನ್ನು ದೂರವಿರಿಸದೆ ಅದರಲ್ಲಿ ಪ್ರಕಾಶಮಯ ಸತ್ಯವನ್ನು, ಎಲ್ಲ ವಸ್ತು–ವಿಷಯಗಳ ಅಂತಸ್ಸಾರದಲ್ಲಿರುವ ಬದಲಾಗದ ದಿವ್ಯಾನಂದವನ್ನು ಕಂಡುಕೊಳ್ಳಲು ಈ ಸಂಕಲ್ಪ ಈ ಅಭೀಪ್ಸೆಯಿಂದ ಆದ್ಯಂತ್ಯವಾಗಿ ಸಾಗಿಹೋದರೆ ಸಂತೃಪ್ತಿ, ಸಮಾಧಾನಗಳಿಂದ ಕಂಡು–ಕೊಳ್ಳುವುದಕ್ಕಿಂತ ಹೆಚ್ಚು ನೇರವಾಗಿ ನೋವಿನ ದ್ವಾರವನ್ನು ಹೆಚ್ಚು ಕೂಡಲೆ ನೋಡಬಹುದು. ಇಂದ್ರಿಯ ಸುಖ ಕುರಿತು ನಾನು ಹೇಳುತ್ತಿಲ್ಲ, ಏಕೆಂದರೆ ಇಂದ್ರಿಯ ಸುಖ ಈ ಗಹನ ದಿವ್ಯಾನಂದಕ್ಕೆ ಬಹುಮಟ್ಟಿಗೆ ಸಂಪೂರ್ಣವಾಗಿ ಸತತ ತನ್ನ ಬೆನ್ನು ತಿರುಗಿಸುತ್ತದೆ.

ಇಂದ್ರಿಯ ಸುಖ ಮೋಸಗೊಳಿಸುವಂತಹದು ಮತ್ತು ಅದು ವಿಕೃತ ಮುಖವಾಡ, ನಮ್ಮ ಗುರಿಯಿಂದ ನಮ್ಮನ್ನು ಬೇರೆಡೆ ಹೊರಳಿಸಿಬಿಡುತ್ತದೆ ಮತ್ತು ಸತ್ಯವನ್ನು ನಾವು ಕಂಡುಕೊಳ್ಳಬೇಕೆಂಬ ಆತುರದಿಂದಿದ್ದರೆ ನಿಶ್ಚಿತವಾಗಿ ಅದನ್ನು ಅರಸಬಾರದು. ಇಂದ್ರಿಯ ಸುಖ ನಮ್ಮನ್ನು ಆವಿಯಾಗಿಸಿಬಿಡುತ್ತದೆ, ಮೋಸಗೊಳಿಸುತ್ತದೆ, ಅಡ್ಡದಾರಿಗೆ ಕೊಂಡೊಯ್ಯುತ್ತದೆ. ನೋವು ನಮ್ಮನ್ನು ಆಳವಾದ ಸತ್ಯದತ್ತ ಮರಳಿ ಕರೆತರುತ್ತದೆ, ನಾವು ಅದನ್ನು ಸಹಿಸಿಕೊಳ್ಳುವುದಕ್ಕಾಗಿ ಏಕಾಗ್ರತೆಯಲ್ಲಿರುವ ಮತ್ತು ನಮ್ಮನ್ನು ತುಳಿದುಹಾಕುವ ಈ ವಿಷಯವನ್ನು ಎದುರಿಸಲು ಶಕ್ತರಾಗುವ ನಿರ್ಬಂಧಕ್ಕೆ ಒಳಪಡಿಸುತ್ತದೆ. ಮನುಷ್ಯ ಬಲವುಳ್ಳವನಾಗಿದ್ದರೆ ನೋವಿನಲ್ಲಿಯೇ ಬಹಳ ಸುಲಭವಾಗಿ ನಿಜವಾದ ಬಲವನ್ನು ಮತ್ತೆ ಕಂಡುಕೊಳ್ಳುತ್ತಾನೆ. ನೋವಿನಲ್ಲಿಯೇ ಮನುಷ್ಯ ಬಹಳ ಸುಲಭವಾಗಿ ನಿಜವಾದ ನಂಬಿಕೆಯನ್ನು ಮತ್ತೆ ಕಂಡುಕೊಳ್ಳುತ್ತಾನೆ, ನಂಬಿಕೆ ಎಲ್ಲ ನೋವಿನ ಮೇಲ್ಗಡೆ ಹಾಗೂ ಆಚೆಗೆ ಇದೆ.



ಮನುಷ್ಯ ತನ್ನ ಸಂತೋಷದಲ್ಲಿಯೇ ಮುಳುಗಿಬಿಟ್ಟು ತನ್ನನ್ನು ಮರೆತುಬಿಟ್ಟಾಗ, ವಿಷಯಗಳು ಬರುತ್ತಿರುವಂತೆ ಅವುಗಳನ್ನು ಸ್ವೀಕರಿಸಿದಾಗ, ಗಂಭೀರ–ವಾಗಿರುವುದನ್ನು, ಜೀವನವನ್ನು ಎದುರಿಸಿ ನೋಡುವುದನ್ನು ತಪ್ಪಿಸಿಕೊಂಡಾಗ, ಒಂದೇ ಶಬ್ದದಲ್ಲಿ ಹೇಳುವುದಾದರೆ ಪರಿಹರಿಸಬೇಕಾದ ಸಮಸ್ಯೆ ಇದೆ ಎಂಬುದನ್ನು ಮರೆಯುವುದು, ನಮ್ಮ ಜೀವನಕ್ಕೆ ಹಾಗೂ ಅಸ್ತಿತ್ವಕ್ಕೆ ಒಂದು ಕಾರಣವಿದೆಯೆಂದು ಕಂಡುಕೊಳ್ಳಬೇಕಾದುದನ್ನು ಮರೆಯುವುದು, ನಾವಿಲ್ಲಿ ಏನನ್ನೂ ಕಲಿತುಕೊಳ್ಳದೆ, ಏನನ್ನೂ ಕೈಕೊಳ್ಳದೆ ಸುಮ್ಮನೆ ನಮ್ಮ ಸಮಯವನ್ನು ಕಳೆಯುವುದಕ್ಕೆ ಇದ್ದೇವೆ ಎಂದುಕೊಳ್ಳುವುದು ಇದೆಲ್ಲ ಮನುಷ್ಯ ನಿಜವಾಗಿ ತನ್ನ ವೇಳೆಯನ್ನು ಹಾಳುಮಾಡಿದ ಹಾಗೆ, ನಮಗೆ ಕೊಟ್ಟ ಅವಕಾಶವನ್ನು ತಪ್ಪಿಸಿಕೊಂಡ ಹಾಗೆ. ಇದು – ಅನನ್ಯವಾದದ್ದು ಎಂದು ಹೇಳಲಾರೆ, ಆದರೆ ಅಸ್ತಿತ್ವಕ್ಕೆ ಅದ್ಭುತ ಅವಕಾಶ, ಅದು ಪ್ರಗತಿಯ ಒಂದು ಕ್ಷೇತ್ರ, ಶಾಶ್ವತತೆಯಲ್ಲಿ ಜೀವನದ ರಹಸ್ಯವನ್ನು ಶೋಧಿಸ–ಬಹುದಾದುದಕ್ಕೆ ಒಂದು ಕ್ಷಣ, ಏಕೆಂದರೆ ಈ ಭೌತಿಕ, ಪ್ರಾಪಂಚಿಕ ಅಸ್ತಿತ್ವ ಒಂದು ಅದ್ಭುತ ಅವಕಾಶ, ಜೀವನದ ಉದ್ದೇಶವನ್ನು ಕಂಡುಕೊಳ್ಳಲು, ಈ ಆಳಾತಿ ಆಳದ ಸತ್ಯದತ್ತ ನೀವು ಮುಂದೆ ಸಾಗುವಂತೆ ಮಾಡಲು, ದೈವೀ ಜೀವನದ ಸನಾತನ ಅತ್ಯಾನಂದದ ಸಂಪರ್ಕದಲ್ಲಿ ಇರಿಸುವ ಈ ರಹಸ್ಯವನ್ನು ನೀವು ಶೋಧಿಸುವಂತೆ ಮಾಡಲು ನಿಮಗೆ ಕೊಡಲಾದ ಒಂದು ಸಾಧ್ಯತೆ.

**(ಮೌನ)**

ವೇದನೆಯನ್ನು, ನೋವನ್ನು ಅರಸುವುದು ರೋಗಗ್ರಸ್ತ ಮನೋಭಾವ, ಅದನ್ನು ನೀವು ತ್ಯಜಿಸಬೇಕು ಎಂದು ನಿಮಗೆ ಈಗಾಗಲೆ ಹಲವಾರು ಸಲ ಹೇಳಿದ್ದೇನೆ, ಆದರೆ ಉಪೇಕ್ಷೆಯ ಮೂಲಕ, ಮೇಲ್ಮೈಯ ಹುಡುಗಾಟಿಕೆ ಸ್ವಭಾವದ ಚಲನೆಯ ಮೂಲಕ, ಅಡ್ಡದಾರಿ ಹಿಡಿಯುವುದರ ಮೂಲಕ ಪಲಾಯನ ಮಾಡುವುದು ಹೇಡಿತನ. ನೋವು ಬಂದಾಗ ಅದೇನನ್ನೋ ಕಲಿಸಿಕೊಡಲು ಬರುತ್ತದೆ. ಅದನ್ನು ನಾವು ಹೆಚ್ಚು ತೀವ್ರಗತಿಯಿಂದ ಕಲಿತುಕೊಂಡಾಗ ನೋವಿಗಾಗಿರುವ ಆವಶ್ಯಕತೆ ಕಡಿಮೆಯಾಗುತ್ತದೆ ಮತ್ತು ನಮಗೆ ಅದರ ರಹಸ್ಯ ತಿಳಿದುಬಂದರೆ ನಂತರ ನೋವಿಗೊಳಗಾಗುವುದು ಸಾಧ್ಯವಾಗುವುದಿಲ್ಲ, ಏಕೆಂದರೆ ಅದರ ಕಾರಣವನ್ನು, ನಿಮಿತ್ತವನ್ನು, ವೇದನೆಯ ಮೂಲವನ್ನು ಮತ್ತು ಅದನ್ನು ದಾಟಿಕೊಂಡು ಆಚೆಗೆ ಹೋಗಬೇಕಾದ ಮಾರ್ಗವನ್ನು ಆ ರಹಸ್ಯ ತೆರೆದುತೋರಿಸುತ್ತದೆ.

ರಹಸ್ಯವು ಅಹಂಕಾರದಿಂದ ಹೊರಹೊಮ್ಮುವುದರಲ್ಲಿದೆ, ಅದರ ಸೆರೆ ಮನೆಯಿಂದ ಹೊರಗೆ ಹೊರಟುಹೋಗುವುದರಲ್ಲಿದೆ, ಭಗವಂತನೊಡನೆ ಏಕತೆ ಪಡೆದು ಅವನಲ್ಲಿ ಮುಳುಗುಹಾಕುವುದರಲ್ಲಿದೆ. ಒಮ್ಮೆ ಮನುಷ್ಯ ಈ ರಹಸ್ಯವನ್ನು ಶೋಧಿಸಿದಾಗ ಮತ್ತು ತನ್ನ ಸತ್ತೆಯಲ್ಲಿ ಸಿದ್ಧಿಸಿಕೊಂಡಾಗ ನೋವು ತನ್ನ ಸಮರ್ಥನೆಯನ್ನು ಕಳೆದುಕೊಳ್ಳುತ್ತದೆ, ವೇದನೆ ಮಾಯವಾಗುತ್ತದೆ. ಅದು ಸರ್ವಸಮರ್ಥ ಉಪಾಯ, ಕೇವಲ ಸತ್ತೆಯ ಆಳಾತಿ ಆಳದ ಭಾಗಗಳಲ್ಲಿ, ಆತ್ಮದಲ್ಲಿ, ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಅಷ್ಟೇ ಅಲ್ಲ, ಆದರೆ ಜೀವನದಲ್ಲಿ ಹಾಗೂ ದೇಹದಲ್ಲಿಯೂ ಕೂಡ ಅದು ಹಾಗಿರುತ್ತದೆ.

– **ಶ್ರೀಮಾತೆ**

*

## ವಿಶ್ವದ ನೈಜತೆ ದಿವ್ಯಾನಂದವಾಗಿದೆ

"ಭಗವಂತ ಪ್ರಕೃತಿಯತ್ತ ವಾಲುವುದನ್ನು ನಿಲ್ಲಿಸಿಬಿಡಲಾರ, ಹಾಗೆಯೇ ಮನುಷ್ಯ ಭಗವಂತನತ್ತ ಅಭೀಪ್ಸೆ ಪಡುವುದನ್ನು ಬಿಟ್ಟುಕೊಡಲಾರ. ಅದು ಸಾಂತ ಅನಂತದೊಡನೆ ಹೊಂದಿದ ಸನಾತನ ಸಂಬಂಧ. ಒಬ್ಬರು ಇನ್ನೊಬ್ಬರಿಗೆ ಮುಖ ತಿರುಗಿಸುವಂತೆ ತೋರಿಬಂದರೂ ಅದು ಹೆಚ್ಚು ನಿಕಟ ಭೇಟಿಗಾಗಿ ಹಿಮ್ಮೆಟ್ಟುವುದಾಗಿದೆ.

"ಮನುಷ್ಯನಲ್ಲಿ ವಿಶ್ವದ ಸ್ವಭಾವ ಮತ್ತೆ ಸ್ವ–ಅರಿವುಳ್ಳದ್ದಾಗುತ್ತದೆ, ಅದರಿಂದಾಗಿ ಅದು ದೈವೀ ಸಂತೋಷಪಡುವವನತ್ತ ಶ್ರೇಷ್ಠ ಜಿಗಿತ ಮಾಡಬಹುದು. ತನಗರಿವಿಲ್ಲದೆಯೇ ವಿಶ್ವದ ಸ್ವಭಾವ ದೈವೀ ಸಂತೋಷ ಪಡುವವನನ್ನು ತನ್ನ ವಶದಲ್ಲಿರಿಸಿಕೊಳ್ಳಬಹುದು. ಜೀವನ ಹಾಗೂ ಸಂವೇದನೆಗಳು ಅವನನ್ನು ವಶದಲ್ಲಿಟ್ಟುಕೊಂಡಿದ್ದರೂ ಅದನ್ನು ನಿರಾಕರಿಸುತ್ತ ಅವನನ್ನು ಅರಸುತ್ತವೆ. ವಿಶ್ವದ ಸ್ವಭಾವ ಭಗವಂತನನ್ನು ಅರಿಯದು. ಕೇವಲ ಏಕೆಂದರೆ ಅದಕ್ಕೆ ತನ್ನರಿವೇ ಇಲ್ಲ. ಅದು ತನ್ನ ಬಗ್ಗೆ ಅರಿವನ್ನು ಪಡೆದಾಗ, ಮಿಶ್ರಣಕ್ಕೊಳಗಾಗದ ಸತ್ತೆಯ ಆನಂದವನ್ನು ಅರಿತುಕೊಳ್ಳುವುದು."

"ಒಂದಾಗಿರುವಿಕೆಯಲ್ಲಿ ವಶಪಡಿಸಿಕೊಂಡಿರುವುದು, ಒಂದಾಗಿರುವಿಕೆಯಲ್ಲಿ ಕಳೆದುಕೊಂಡಿರದೆ ಇರುವುದು ರಹಸ್ಯ ವಿಷಯವಾಗಿದೆ. ದೇವ ಮತ್ತು ಮನುಷ್ಯ, ಜಗತ್ತು ಮತ್ತು ಜಗತ್ತಿನಾಚೆಗಿರುವುದು ಇವುಗಳಲ್ಲಿ ಪ್ರತಿಯೊಂದು ಇನ್ನೊಂದನ್ನು



ಅರಿತುಕೊಂಡು ಏಕವಾಗುತ್ತವೆ. ಅವುಗಳ ವಿಭಜನೆ ಅಜ್ಞಾನಕ್ಕೆ ಕಾರಣವಾಗಿದೆ, ಇದು ಅಜ್ಞಾನ ವೇದನೆಗೆ ಕಾರಣವಾಗಿರುವ ರೀತಿಯದಾಗಿದೆ."

ಯೋಚನೆಗಳು ಹಾಗೂ ಮಿನುಗು ನೋಟಗಳು (16/382) – **ಶ್ರೀ ಅರವಿಂದರು**

ಇಲ್ಲಿ ಶ್ರೀ ಅರವಿಂದರು ಹೇಳುತ್ತಿರುವುದರ ಪ್ರಕಾರ ವಿಶ್ವದ ನೈಜತೆ ದೇವನೆಂದು ಕರೆಯಲಾಗಿರುವುದಾಗಿದೆ, ಆದರೆ ಅದು ಸಾರದಲ್ಲಿ ದಿವ್ಯಾನಂದ–ವಾಗಿದೆ. ವಿಶ್ವವನ್ನು ದಿವ್ಯಾನಂದಕ್ಕಾಗಿ ದಿವ್ಯಾನಂದದಲ್ಲಿ ಸೃಷ್ಟಿಸಲಾಯಿತು. ಆದರೆ ಸೃಷ್ಟಿಯಾದುದು ಸೃಷ್ಟಿಕರ್ತನೊಡನೆ ಪರಿಪೂರ್ಣವಾಗಿ ಒಂದಾಗಿದ್ದಾಗ ಈ ದಿವ್ಯಾನಂದ ಅಸ್ತಿತ್ವದಲ್ಲಿರಬಲ್ಲದು ಮತ್ತು ಶ್ರೀ ಅರವಿಂದರು ಈ ಒಂದಾಗಿರುವಿಕೆಯನ್ನು ದೈವೀ ವಶದಲ್ಲಿಟ್ಟುಕೊಳ್ಳುವವನು ಎಂದರೆ ಸೃಷ್ಟಿಕರ್ತ ಎಂದು ವರ್ಣಿಸುತ್ತಾರೆ. ಈ ದೈವೀ ಒಡೆತನವುಳ್ಳವನನ್ನು ಅವನ ಸೃಷ್ಟಿ ಒಡೆತನದಲ್ಲಿರಿಸಿಕೊಳ್ಳುತ್ತದೆ, ಅದು ಒಂದು ಬಗೆಯ ಪರಸ್ಪರ ಒಡೆತನ. ಇದೇ ಒಂದಾಗಿರುವಿಕೆಯ ಸಾರ ಮತ್ತು ಎಲ್ಲ ಆನಂದದ ಮೂಲ.

ದೈವೀ ವಶದಲ್ಲಿರಿಸಿಕೊಳ್ಳುವವನು ಇನ್ನೂ ಒಡೆತನ ಹೊಂದಿಲ್ಲ ಮತ್ತು ಒಡೆತನಕ್ಕೊಳಗಾದುದು ಇನ್ನೂ ದೈವೀ ವಶದಲ್ಲಿರಿಸಿಕೊಳ್ಳುವವನ್ನು ಒಡೆತನ–ಕ್ಕೊಳಪಡಿಸಿಕೊಂಡಿಲ್ಲ ಎಂಬ ಕಾರಣದಿಂದಾಗಿ ವಿಭಜನೆಯ ಸೃಷ್ಟಿಯಾಯಿತು ಮತ್ತು ಸಾರಭೂತ ದಿವ್ಯಾನಂದ ಅಜ್ಞಾನವಾಗಿ ಬದಲಾಯಿತು. ಮತ್ತು ಈ ಅಜ್ಞಾನ ಎಲ್ಲ ವೇದನೆಯ ಕಾರಣ. ಅಜ್ಞಾನ (Ignorance), ಅದು ಸಾಮಾನ್ಯವಾಗಿ ಅರ್ಥಮಾಡಿಕೊಂಡ ರೀತಿಯ ಅಜ್ಞಾನವಲ್ಲ, ಏಕೆಂದರೆ ಶ್ರೀ ಅರವಿಂದರು ಅದನ್ನು "Nescience" ಅರಿವಿಲ್ಲದಿರುವಿಕೆ ಎಂದು ಕರೆಯುತ್ತಾರೆ. ಆ ಅಜ್ಞಾನ ಇನ್ನೊಂದರ ಪರಿಣಾಮ. ನಿಜವಾದ ಅಜ್ಞಾನ ಒಂದಾಗಿರುವಿಕೆಯ, ಏಕತೆಯ, ತಾದಾತ್ಮ್ಯದ ಬಗೆಗಿನ ಅಜ್ಞಾನ, ಅದೇ ಎಲ್ಲ ವೇದನೆಗೆ ಕಾರಣ.

ವಿಭಜನೆ ಪ್ರಾರಂಭವಾದಾಗಿನಿಂದ ಮತ್ತು ಸೃಷ್ಟಿಕರ್ತನೊಡನೆ ನೇರ ಸಂಬಂಧ ಕಳೆದುಕೊಂಡುದುದರಿಂದ ಅಜ್ಞಾನ ಆಳಿಕೆ ನಡೆಸಿದೆ ಮತ್ತು ಎಲ್ಲ ವೇದನೆ ಅದರ ಪರಿಣಾಮ.

ದೈವೀ ಮೂಲದೊಂದಿಗೆ ಏಕತೆಯನ್ನು ಪುನಃ ಸ್ಥಾಪಿಸಿದ ಕ್ಷಣದಿಂದ ಎಲ್ಲ ವೇದನೆ ಮಾಯವಾಗುತ್ತದೆ ಎಂಬುದು, ಆಂತರಿಕ ಅನುಭವ ಪಡೆದಿದ್ದ ಎಲ್ಲರ ಅನುಭವಕ್ಕೆ ಬಂದಿತ್ತು. ಆದರೆ ಪಟ್ಟುಹಿಡಿದಿರುವ ಒಂದು ಚಲನೆಯಿದೆ, ಅದನ್ನು

ಕುರಿತು ನಿಮ್ಮ ಹತ್ತಿರ ಕಳೆದ ವಾರ ಮಾತನಾಡಿದ್ದೆ. ಆ ಚಲನೆ ಸೃಷ್ಟಿಯ ಮೂಲದಲ್ಲಿ ಈ ಸಾರಭೂತ ದಿವ್ಯಾನಂದವನ್ನಿರಿಸದೆ ಆಸೆಯನ್ನಿರಿಸಿತು. ಸೃಷ್ಟಿಯ, ಸ್ವ–ಪ್ರಕಟಣೆಯ, ಸ್ವ–ಅಭಿವ್ಯಕ್ತಿಯ ದಿವ್ಯಾನಂದವನ್ನು ಆಸೆಯೆಂದು ಪರಿಗಣಿಸಿದ ಅನ್ವೇಷಕರ ಹಾಗೂ ಋಷಿಗಳ ಇಡಿಯಾದ ಒಂದು ಸರಣಿಯೇ ಇದೆ. ಬುದ್ಧ ಧರ್ಮದವರದು ಇದೇ ಬಗೆಯದಾಗಿದೆ. ಪ್ರಕಟಣೆಯ ಹಾಗೂ ಸಂಭೂತಿಯ ಸಾರಭೂತ ದಿವ್ಯಾನಂದವನ್ನು ನಮಗೆ ಮರಳಿ ತಂದುಕೊಡುವ ಒಂದಾಗಿರುವಿಕೆಯಲ್ಲಿ ಪರಿಹಾರ ಕಂಡುಕೊಳ್ಳದೆ ಅವರು ಎಲ್ಲ ಆಸೆಯನ್ನು ಇಡಿಯಾಗಿ ನಿರಾಕರಿಸಿ ನಿರ್ವಾಣಕ್ಕೆ ಮರಳಿ ಹೋಗುವುದನ್ನು ಗುರಿ ಹಾಗೂ ಮಾರ್ಗವೆಂದು ಪರಿಗಣಿಸಿದರು.

ಈ ಕಲ್ಪನೆ ಸಾರಭೂತ ತಪ್ಪು ಗ್ರಹಿಕೆಯದಾಗಿದೆ. ಮುಕ್ತಿಗಾಗಿ ಸಲಹೆ ನೀಡುವ ಎಲ್ಲ ವಿಧಾನಗಳು ಅಭಿವೃದ್ಧಿಯವಾಗಿವೆ, ಅವು ಬಹಳ ಉಪಯುಕ್ತವಾಗಬಲ್ಲವು. ಸಾರದಲ್ಲಿ ಈ ಜಗತ್ತು ಕೆಟ್ಟದಾಗಿದೆ, ಏಕೆಂದರೆ ಅದು ಆಸೆಯ ಪರಿಣಾಮ ಮತ್ತು ಅದರಿಂದ ಮನುಷ್ಯ ಎಷ್ಟೇ ಬೆಲೆ ತೆತ್ತಾದರೂ ಸಾಧ್ಯವಿದ್ದಷ್ಟು ಬೇಗನೆ ಪಾರಾಗಿಹೋಗಬೇಕು ಎಂಬ ಕಲ್ಪನೆ ಮನುಕುಲದ ಇತಿಹಾಸದಲ್ಲಿ ಎಲ್ಲ ಆಧ್ಯಾತ್ಮಿಕ ಜೀವನವನ್ನು ಅತ್ಯಂತ ಗಂಭೀರ ರೀತಿಯಲ್ಲಿ ತಿರುಚಿರುವುದಾಗಿದೆ.

ಒಂದು ವಿಶಿಷ್ಟ ಸಮಯದಲ್ಲಿ ಅದು ಉಪಯುಕ್ತವಾಗಿರಬಹುದು, ಏಕೆಂದರೆ ಜಗತ್ತಿನ ಇತಿಹಾಸದಲ್ಲಿ ಎಲ್ಲವೂ ಉಪಯುಕ್ತವಾಗಿರುತ್ತದೆ. ಆದರೆ ಈ ಉಪಯುಕ್ತತೆಯ ಕಾಲ ಮುಗಿದುಹೋಗಿದೆ, ಅದು ಹಳತಾಗಿದೆ. ಈ ಕಲ್ಪನೆಯನ್ನು ಹಿಂದೆ ಬಿಟ್ಟುಕೊಟ್ಟು ಉಚ್ಚತರ ದೈವೀ ಸತ್ಯದತ್ತ, ಅಸ್ತಿತ್ವದ ದಿವ್ಯಾನಂದದತ್ತ, ಏಕತೆಯ ದೈವೀ ಸಂತೋಷದತ್ತ ಮತ್ತು ಭಗವಂತನ ಪ್ರಕಟಣೆಯತ್ತ ಮರಳಿ ಹೋಗುವ ಕಾಲ ಸನ್ನಿಹಿತವಾಗಿದೆ.

ಈ ಹೊಸ ನೆಲೆನಿರ್ದೇಶನ – ಅದರ ಪಾರ್ಥಿವ (terrestrial) ಸಿದ್ಧಿ ಹೊಸದೆಂಬ ಅರ್ಥದಲ್ಲಿ – ಎಲ್ಲ ಮೊದಲಿನ ಆಧ್ಯಾತ್ಮಿಕ ನೆಲೆ ನಿರ್ದೇಶನಗಳ ಸ್ಥಾನದಲ್ಲಿ ಬರಬೇಕು ಮತ್ತು ಹೊಸ ಸಿದ್ಧಿಗೆ ಮಾರ್ಗ ತೆರೆದಿರಿಸಬೇಕು, ಆ ಹೊಸ ಸಿದ್ಧಿ ಅತಿಮಾನಸದ್ದಾಗಿದೆ. ಆ ಕಾರಣದಿಂದಾಗಿಯೇ ನಾನು ಕಳೆದ ವಾರ ದಿವ್ಯಾನಂದ, ನಿಜವಾದ ದೈವೀ ದಿವ್ಯಾನಂದ ವಿಜಯ ತಂದುಕೊಡಬಲ್ಲದೆಂದು ಹೇಳಿದ್ದೆ.



ಸ್ವಾಭಾವಿಕವಾಗಿ ಈ ದಿವ್ಯಾನಂದ ಎಂದರೆ ಏನು ಎಂಬುದರ ಬಗ್ಗೆ ಗೊಂದಲವಿರಬಾರದು, ಮತ್ತು ಆ ಕಾರಣದಿಂದಾಗಿಯೇ ಶ್ರೀ ಅರವಿಂದರು ಪ್ರಾರಂಭದಿಂದ "ಎಲ್ಲ ಸಂತೋಷಗಳಾಚೆ ದಾಟಿಹೋದಾಗ ಮಾತ್ರ ಮನುಷ್ಯ ಪರಮಾನಂದ (Bliss) ದಲ್ಲಿ ಪ್ರವೇಶಿಸಬಲ್ಲ" ಎಂದು ಎಚ್ಚರಿಕೆ ನೀಡಿದ್ದಾರೆ. ಈ ದಿವ್ಯಾನಂದ (Delight) ದ ಪ್ರಕಟಣೆಯಿಂದ ಬರುವ ಸ್ಥಿತಿ, ನಿಖರವಾಗಿ, ಆ ದೈವೀ ಪರಮಾನಂದವಾಗಿರುತ್ತದೆ. ಆದರೆ ಅದು ಸಾಮಾನ್ಯವಾಗಿ ಸಂತೋಷ, ಇಂದ್ರಿಯ ಸುಖ ಎಂದು ಕರೆಯುವುದರ ವಿರುದ್ಧವಾಗಿರುತ್ತದೆ, ಆ ಇನ್ನೊಂದನ್ನು ಪಡೆಯಲು ಇವುಗಳನ್ನು ಸಂಪೂರ್ಣವಾಗಿ ಬಿಟ್ಟುಕೊಡಬೇಕು.

*

ಮನುಷ್ಯ ಒಳಗಾಗಬೇಕೆಂದು ನಾನು ಹೇಳಿದ ಈ ಶಿಸ್ತುಪಾಲನೆಯನ್ನು ದಿವ್ಯಾನಂದವನ್ನು ಕಂಡುಕೊಳ್ಳುವ ಧ್ಯೇಯವನಿಟ್ಟುಕೊಂಡು ಅಚರಿಸಿದರೆ ಪರಿಣಾಮ ತಡೆಗೊಳಗಾಗುತ್ತದೆ, ಏಕೆಂದರೆ ಅದರಲ್ಲಿ ಅಹಂಕಾರದ ಅಂಶವನ್ನು ಒಳಗೆ ತರಲಾಗಿರುತ್ತದೆ, ಅದನ್ನು ಒಂದು ಗುರಿ ಸಾಧನೆಯ ರೂಪದಲ್ಲಿ ಮಾಡಲಾಗುತ್ತದೆ, ಅರ್ಪಣಾಭಾವದ ರೂಪದಲ್ಲಲ್ಲ, ಅದೊಂದು ಒತ್ತಾಯದ ಬೇಡಿಕೆ, ಮತ್ತು ಆಗ ... ಅದು ಬರುತ್ತದೆ, ದೀರ್ಘಕಾಲ ತೆಗೆದುಕೊಂಡ ನಂತರವಾಗಲಿ ಬರುತ್ತದೆ – ಮನುಷ್ಯ ಏನನ್ನೂ ಕೇಳದೆ ಇದ್ದಾಗ, ನಿರೀಕ್ಷಿಸದೆ ಇದ್ದಾಗ, ಯಾವ ಬಗೆಯ ಭರವಸೆ ಇಟ್ಟುಕೊಳ್ಳದೇ ಇದ್ದಾಗ, ಸರಳವಾಗಿ ಕೇವಲ ಅದೇ ಆದಾಗ ಅದು ತನ್ನನ್ನು ಕೊಟ್ಟುಕೊಳ್ಳುವುದಾಗಿರುತ್ತದೆ, ಅಭೀಪ್ಸೆ ಯಾಗಿರುತ್ತದೆ, ಚೌಕಾಶಿ ಮಾಡದ ಸ್ವಯಂಪ್ರೇರಿತ ಆವಶ್ಯಕತೆಯಾಗಿರುತ್ತದೆ – ದೈವಿಕವಾಗುವ ಆವಶ್ಯಕತೆ, ಅಷ್ಟೇ.

**(9/7–9, 23)** **– ಶ್ರೀಮಾತೆ**

*

## ತೊಂದರೆಗಳನ್ನು ನಿವಾರಿಸುವ ಸಾಮರ್ಥ್ಯಪೂರ್ಣ ರೀತಿ

ಸದ್ಗುಣ ಪರಿಪೂರ್ಣತೆಯನ್ನು ಅರಸುತ್ತದೆ, ಆದರೆ ಪರಿಪೂರ್ಣತೆ ಇಡಿಯಾಗಿರುತ್ತದೆ, ಹಾಗಾಗಿ ಇವೆರಡೂ ಚಲನೆಗಳು ಒಂದನ್ನೊಂದು ವಿರೋಧಿಸುತ್ತವೆ. ಸದ್ಗುಣ ತೆಗೆದುಹಾಕುವ, ಕುಂದಿಸುವ, ಮಿತಿಗಳನ್ನು

ಸ್ಥಿರಪಡಿಸುವ ಕಾರ್ಯ ಕೈಕೊಳ್ಳುತ್ತದೆ, ಪರಿಪೂರ್ಣತೆ ಎಲ್ಲವನ್ನೂ ಒಪ್ಪಿಕೊಳ್ಳುತ್ತದೆ, ಯಾವುದನ್ನೂ ತಿರಸ್ಕರಿಸುವುದಿಲ್ಲ, ಆದರೆ ಪ್ರತಿಯೊಂದನ್ನು ಆದರದರ ಸ್ಥಾನದಲ್ಲಿರಿಸುತ್ತದೆ. ಹಾಗಾಗಿ ಅವು ಒಂದಕ್ಕೊಂದು ಸರಿಹೊಂದಲಾರವು.

ಜೀವನವನ್ನು ಗಂಭೀರವಾಗಿ ತೆಗೆದುಕೊಳ್ಳುವುದರಲ್ಲಿ, ಸಾಧಾರಣವಾಗಿ, ಎರಡು ಚಲನೆಗಳಿರುತ್ತವೆ. ಮೊದಲನೆಯದು ಯಾವ ಪ್ರಾಧಾನ್ಯವೂ ಇಲ್ಲದ ವಿಷಯಗಳಿಗೆ ಮಹತ್ವ ಕೊಡುವುದಾಗಿದೆ. ಮತ್ತು ಎರಡನೆಯದು ಜೀವನವನ್ನು ಕೆಲವೊಂದು ವಿಶಿಷ್ಟ ಸಂಖ್ಯೆಯ ಗುಣಗಳಿಗೆ ಮಿತಿಗೊಳಿಸುವುದಾಗಿದೆ. ಆ ಗುಣಗಳೆಂದರೆ ಪರಿಶುದ್ಧ ಮತ್ತು ಅಸ್ತಿತ್ವದಲ್ಲಿರಲು ಯೋಗ್ಯವಾದದ್ದು ಎಂದು ಗಣಿಸಲಾದವುಗಳು. ಕೆಲವು ಜನರಲ್ಲಿ – ಉದಾಹರಣೆಗೆ ಸೌಮ್ಯರಾದವರು, ಅತಿನೇಮಿಷ್ಠರಾದವರು(puritans) ಎಂಬವರನ್ನು ಕುರಿತು ಶ್ರೀ ಅರವಿಂದರು ಹೇಳಿದ್ದೇನೆಂದರೆ ಅವರಲ್ಲಿ ಈ ಸದ್ಗುಣ ನಿರ್ಭಾವದ್ದು, ಶುಷ್ಕವಾದ್ದು, ನಿರುತ್ಸಾಹಕರ, ಆಕ್ರಮಣಕಾರಿ ಅಗುತ್ತದೆ ಮತ್ತು ಅದು ಎಲ್ಲೆಡೆಯಲ್ಲಿ, ಸಂತೋಷಪೂರ್ಣ, ಮುಕ್ತ ಮತ್ತು ಆನಂದದಾಯಕವಾದ ಪ್ರತಿಯೊಂದರಲ್ಲಿ ದೋಷವನ್ನು ಹುಡುಕುತ್ತದೆ.

ಜೀವನವನ್ನು ಪರಿಪೂರ್ಣಗೊಳಿಸುವುದಕ್ಕೆ ಇರುವ ಒಂದೇ ಮಾರ್ಗ – ಸಹಜವಾಗಿ ಇಲ್ಲಿರುವ ಪೃಥ್ವಿಯ ಮೇಲಿನ ಜೀವನವನ್ನು ಎಂಬ ಅರ್ಥದಲ್ಲಿ – ಎಂದರೆ ಅದನ್ನು ನೋಡಲು ಶಕ್ಯವಾಗುವಷ್ಟು ಎತ್ತರದಿಂದ ನೋಡುವುದಾಗಿದೆ, ಕೇವಲ ಅವರ ಸದ್ಯದ ಇಡಿಯಾಗಿರುವಿಕೆಯಲ್ಲಿ ಅಲ್ಲ, ಆದರೆ ಇಡಿಯಾದ ಗತಕಾಲದಲ್ಲಿ, ವರ್ತಮಾನದಲ್ಲಿ ಹಾಗೂ ಭವಿಷ್ಯತ್ತಿನಲ್ಲಿ ಅದರ ಇರುವಿಕೆಯಲ್ಲಿ ಅದೇನಾಗಿತ್ತು, ಅದೇನಿದೆ, ಅದೇನಾಗಲಿದೆ – ಮನುಷ್ಯ ಇದೆಲ್ಲವನ್ನೂ ಒಮ್ಮೆಲೆ ನೋಡಲು ಶಕ್ತನಾಗಬೇಕು. ಏಕೆಂದರೆ ಇರುವ ಒಂದೇ ಮಾರ್ಗವೆಂದರೆ ಪ್ರತಿಯೊಂದನ್ನು ಅದರದರ ಸ್ಥಾನದಲ್ಲಿ ಇರಿಸುವುದಾಗಿದೆ. ಯಾವುದನ್ನೂ ನಿರ್ಮೂಲ ಮಾಡಲಾಗದು, ಏನನ್ನೂ ನಿರ್ಮೂಲ ಮಾಡಬಾರದು, ಆದರೆ ಪ್ರತಿಯೊಂದು ವಸ್ತು–ವಿಷಯ ಅದರ ಸ್ಥಾನದಲ್ಲಿ ಉಳಿದೆಲ್ಲದರ ಜೊತೆಗೆ ಸಾಮರಸ್ಯದಿಂದಿರಬೇಕು, ಮತ್ತು ಆಗ ಇಷ್ಟೊಂದು ಕೆಟ್ಟವಾದವು, ಇಷ್ಟೊಂದು ನಿಂದನೀಯವಾದವು ಮತ್ತು ಇಷ್ಟೊಂದು ಸ್ವೀಕಾರಯೋಗ್ಯವಲ್ಲದವು ಎಂದು ಅತಿನೇಮಿಷ್ಠ ಮನಸ್ಸಿಗೆ ತೋರಿಬರುವ ಈ ಎಲ್ಲ ವಿಷಯಗಳು ಇಡಿಯಾದ ದೈವೀ ಜೀವನದಲ್ಲಿ ಆನಂದದ ಮತ್ತು ಸ್ವಾತಂತ್ರ್ಯದ ಚಲನೆಗಳಾಗುವವು. ಮತ್ತು ಆಗ



ತಿಳಿದುಕೊಳ್ಳುವುದರಿಂದ, ಅರ್ಥ ಮಾಡಿಕೊಳ್ಳುವುದರಿಂದ, ಭಾವನೆಗೆ ತಂದುಕೊಳ್ಳುವುದರಿಂದ ಮತ್ತು ಪರಮೋಚ್ಚನ ಈ ಅದ್ಭುತ ನಗುವನ್ನು ಜೀವಿಸುವುದರಿಂದ ಯಾವುದೂ ನಮ್ಮನ್ನು ತಡೆಯಲಾರದು. ಈ ಪರಮೋಚ್ಚನು ಅನಂತವಾಗಿ ಜೀವಿಸುವುದನ್ನು ಗಮನಿಸುವುದರಲ್ಲಿ ಅನಂತ ಆನಂದ ಪಡೆಯುತ್ತಾನೆ.

ಪ್ರತಿಯೊಂದು ಛಾಯೆಯನ್ನು, ನೋವನ್ನು, ವೇದನೆಯನ್ನು ಕರಗಿಸಿಬಿಡುವ ಈ ದಿವ್ಯಾನಂದ, ಈ ಅದ್ಭುತ ನಗು! ನಿಮ್ಮೊಳಗೆ ಸಾಕಷ್ಟು ಆಳದಲ್ಲಿ ಇಳಿದು ಹೋಗಬೇಕು, ಆಂತರಿಕ ಸೂರ್ಯನನ್ನು ಕಂಡುಕೊಳ್ಳಬೇಕು, ಅವನ ಬೆಳಕು ನಿಮ್ಮ ಮೇಲೆ ಅಧಿಕ ಪ್ರಮಾಣದಲ್ಲಿ ಬೀಳಲು ಅನುವು ಮಾಡಿಕೊಡಬೇಕು. ನಂತರ ಸಾಮರಸ್ಯದಿಂದ ಕೂಡಿದ, ಪ್ರಕಾಶಮಯ ರವಿ ಬೆಳಗಿದ ನಗುವಿನ ಸುರಿತ ಬಿಟ್ಟು ಬೇರೇನೂ ಇರುವುದಿಲ್ಲ, ಅದು ಯಾವ ಛಾಯೆಗಾಗಲಿ ಇಲ್ಲವೆ ನೋವಿಗಾಗಲಿ ಜಾಗ ಬಿಟ್ಟುಕೊಡುವುದಿಲ್ಲ.

ವಾಸ್ತವದಲ್ಲಿ, ತೊಂದರೆಗಳಲ್ಲಿ ದುಃಖಗಳಲ್ಲಿ ನೋವುಗಳಲ್ಲಿ ಅತಿ ದೊಡ್ಡ ವಾದವುಗಳನ್ನೂ ಕೂಡ – ನೀವು ಆ ನಿಲುವಿನಿಂದ, ಅಲ್ಲಿಂದ ನೋಡಬಲ್ಲಿರಾದರೆ, ಅವು ನೈಜವಾಗಿಲ್ಲ ಎಂಬುದನ್ನು ಕಂಡುಕೊಳ್ಳುತ್ತೀರಿ – ಮತ್ತು ಅಲ್ಲಿ ಸಂತೋಷ ಕಾರಕ, ಪ್ರಕಾಶಮಯ ಕಂಪನಗಳಲ್ಲದೆ ಬೇರೇನೂ ಇರುವುದಿಲ್ಲ.

ತೊಂದರೆಗಳನ್ನು ನಿವಾರಿಸಲು, ವೇದನೆಗಳ ಮೇಲೆ ಜಯ ಸಾಧಿಸಲು, ನೋವನ್ನು ತೆಗೆದುಹಾಕಲು ವಾಸ್ತವದಲ್ಲಿ ಇದು ಅತ್ಯಂತ ಸಾಮರ್ಥ್ಯಪೂರ್ಣ ರೀತಿ. ಮೊದಲಿನವೆರಡು ಸಾಪೇಕ್ಷವಾಗಿ ಸುಲಭವಾಗಿರುತ್ತವೆ – ಸಾಪೇಕ್ಷವಾಗಿ ಎಂದು ನಾನು ಹೇಳುತ್ತಿದ್ದೇನೆ. ಕೊನೆಯದು ಹೆಚ್ಚು ಕಠಿಣವಾದದ್ದು, ಏಕೆಂದರೆ ದೇಹ ಹಾಗೂ ಭಾವನೆಗಳು ಅತ್ಯಂತ ಮೂರ್ತ ಸ್ವರೂಪದವಾಗಿವೆ, ಧನಾತ್ಮಕವಾಗಿವೆ ಎಂಬ ರೀತಿಯಲ್ಲಿ ಆವುಗಳನ್ನು ಪರಿಗಣಿಸುವ ರೂಢಿಯನ್ನು ನಾವಿಟ್ಟುಕೊಂಡು ಬಂದಿದ್ದೇವೆ. ಆದರೆ ಅದು ಅದೇ ವಿಷಯ. ಅದು ಹಾಗಿರುವುದೇಕೆಂದರೆ ನಮ್ಮ ದೇಹ ದ್ರವರೂಪದ್ದಾದ, ನಮ್ಯವಾದ, ಅನಿಶ್ಚಿತವಾದ, ಹೊಂದಿಕೊಳ್ಳಬಲ್ಲ ಏನೋ ಒಂದು ಎಂಬುದನ್ನು ನಾವು ಕಲಿತುಕೊಂಡಿಲ್ಲ, ದೇಹದಲ್ಲುಂಟಾಗುವ ಎಲ್ಲ ಅಂಧಕಾರ, ತೊಂದರೆ, ವಿವಾದ, ಅಸಾಮರಸ್ಯ ಮತ್ತು ಕರ್ಕಶವಾಗಿಸುವ, ರೋದಿಸುವ, ಗೋಳಿಡುವ ಪ್ರತಿಯೊಂದು ಇವೆಲ್ಲವನ್ನು

ಕರಗಿಸಿಬಿಡುವ ಈ ಪ್ರಕಾಶಮಯ ನಗುವನ್ನು ಅದರಲ್ಲಿ ಒಳತರುವುದನ್ನು ನಾವು ಕಲಿತುಕೊಂಡಿಲ್ಲ.

ದೈವೀ ನಗುವಿನ ಈ ಸೂರ್ಯ ಎಲ್ಲ ವಸ್ತು–ವಿಷಯಗಳ ಕೇಂದ್ರದಲ್ಲಿ, ಸತ್ಯದಲ್ಲಿ ಇದ್ದಾನೆ, ಅವನನ್ನು ನೋಡುವುದನ್ನು, ಭಾವನೆಗೆ ತಂದುಕೊಳ್ಳುವುದನ್ನು, ಜೀವಿಸುವುದನ್ನು ನಾವು ಕಲಿತುಕೊಳ್ಳಬೇಕು.

**(10/157–58)** **– ಶ್ರೀಮಾತೆ**

*

## ದೇವರು ಪೀಡಕನೆ? – ನಮ್ಮ ದೃಷ್ಟಿಯ ಸೀಮಿತತೆ

ದೇವರು ಅತಿ ದೊಡ್ಡ ಮತ್ತು ಕ್ರೂರ ಪೀಡಕ, ಏಕೆಂದರೆ ಅವನು ಪ್ರೀತಿಸುತ್ತಾನೆ. ನೀವು ಇದನ್ನು ಅರ್ಥ ಮಾಡಿಕೊಳ್ಳಲಾರಿರಿ, ಏಕೆಂದರೆ ನೀವು ಶ್ರೀಕೃಷ್ಣನನ್ನು ನೋಡಿಲ್ಲ, ಅವನೊಡನೆ ಆಟವಾಡಿಲ್ಲ.

"ಯೋಚನೆಗಳು ಹಾಗೂ ಸೂಕ್ತಿಗಳು" **– ಶ್ರೀ ಅರವಿಂದರು**

ಶ್ರೀಕೃಷ್ಣ ಸರ್ವವ್ಯಾಪಿ ಭಗವಂತ, ಪ್ರತಿಯೊಬ್ಬನಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ ಇರುವ ದೈವೀ ಸಾನ್ನಿಧ್ಯ. ಅವನು ಸಾರ್ವಭೌಮ ರೀತಿಯಲ್ಲಿ ಪರಮೋಚ್ಚನ ದಿವ್ಯಾನಂದ ಹಾಗೂ ದಿವ್ಯ ಪ್ರೇಮದ ಮುಖ, ಹಸನ್ಮುಖದ ಕೋಮಲತೆ ಹಾಗೂ ಕ್ರೀಡಾಸಕ್ತ ಉಲ್ಲಾಸವುಳ್ಳವನು. ಅವನು ಆಟಗಾರ, ಆಟ ಹಾಗೂ ಸಹ ಆಟಗಾರರೂ ಕೂಡ ಆಗಿದ್ದಾನೆ. ಆಟ ಮತ್ತು ಅದರ ಪರಿಣಾಮಗಳು ಇಡಿಯಾಗಿ ತಿಳಿದಿರುವುದರಿಂದ, ಕಲ್ಪನೆ ಮಾಡಿಕೊಂಡಿರುವುದರಿಂದ, ಸಂಕಲ್ಪಿಸಿದುದರಿಂದ, ಸಂಘಟಿಸಿದುದರಿಂದ ಮತ್ತು ಪ್ರಜ್ಞಾಪೂರ್ವಕವಾಗಿ ಇಡಿಯಾದುದರಲ್ಲಿ ಆಟವಾಡಿರುವುದರಿಂದ, ಅಲ್ಲಿ ಆಟದ ಆನಂದದ ಹೊರತಾಗಿ ಬೇರಾವುದಕ್ಕೆ ಸ್ಥಾನವಿರುವುದು ಸಾಧ್ಯವಿಲ್ಲ. ಹೀಗೆ ಶ್ರೀಕೃಷ್ಣನನ್ನು ನೋಡುವುದೆಂದರೆ ಆಂತರಿಕ ದೇವನನ್ನು ನೋಡಿದ ಹಾಗೆ ಮತ್ತು ಅವನ ಪ್ರಜ್ಞೆಯಲ್ಲಿ ಪಾಲು ಪಡೆದ ಹಾಗೆ. ಈ ಸ್ಥಿತಿಯನ್ನು ಸಿದ್ಧಿಸಿಕೊಂಡಾಗ ನೀವು ದೈವೀ ಲೀಲೆಯ ದಿವ್ಯಾನಂದದಲ್ಲಿ ಕೂಡಲೆ ಪ್ರವೇಶಿಸುತ್ತೀರಿ, ಗುರುತಿಸಿಕೊಳ್ಳುವಿಕೆ ಹೆಚ್ಚು ಪರಿಪೂರ್ಣವಾದಂತೆ ಆ ಸ್ಥಿತಿ ಹೆಚ್ಚು ಪರಿಪೂರ್ಣವಾಗುವುದು.

ಆದರೆ ನಿಮ್ಮ ಪ್ರಜ್ಞೆಯ ಒಂದು ಮೂಲೆ ಸಾಮಾನ್ಯ ಗ್ರಹಿಕೆಯನ್ನು



ತಿಳಿವಳಿಕೆಯನ್ನು ಕಾಪಾಡಿಕೊಂಡುಬಂದಿದ್ದರೆ, ಆಗ ನೀವು ಇತರರ ವೇದನೆಯನ್ನು ನೋಡುತ್ತೀರಿ ಮತ್ತು ಅಷ್ಟೊಂದು ವೇದನೆಗೆ ಕಾರಣವಾಗಿರುವ ಲೀಲೆ ಬಹಳ ಕ್ರೂರವಾದದ್ದು ಎಂದು ಕಂಡುಕೊಳ್ಳುತ್ತೀರಿ ಮತ್ತು ಅಂತಹ ವೇದನೆಯಲ್ಲಿ ಹರ್ಷ ಕಂಡುಕೊಳ್ಳುವ ದೇವ ಬಹಳ ಭಯಾನಕ ಪೀಡಕನಾಗಿರಬೇಕೆಂಬ ತೀರ್ಮಾನಕ್ಕೆ ಬರುತ್ತೀರಿ. ಇನ್ನೊಂದೆಡೆಗೆ ಭಗವಂತನೊಡನೆ ಗುರುತಿಸಿಕೊಳ್ಳುವ ಅನುಭವವಿದ್ದರೆ, ಅವನು ತನ್ನ ಲೀಲೆಯಲ್ಲಿ ಇರಿಸುವ ಭವ್ಯ ಮತ್ತು ಅದ್ಭುತ ಪ್ರೇಮವನ್ನು ಮರೆಯಲಾರಿರಿ, ಮತ್ತು ನಮ್ಮ ದೃಷ್ಟಿಯ ಸೀಮಿತತೆ ನಾವು ಈ ರೀತಿಯ ತೀರ್ಮಾನಕ್ಕೆ ಬರುವಂತೆ ಮಾಡುತ್ತದೆ ಮತ್ತು ಅವನು ಸ್ವಂತ ಇಷ್ಟದಿಂದ ಪೀಡಕನಾಗಿರುವುದು ದೂರ ಉಳಿದು ಶ್ರೇಷ್ಠ ಉಪಕಾರಿ, ಪ್ರೇಮವುಳ್ಳವನು ಎಂಬುದನ್ನು ತಿಳಿದುಕೊಳ್ಳುತ್ತೀರಿ. ಆ ಪ್ರೇಮ ಜಗತ್ತಿಗೆ ಹಾಗೂ ಜನರಿಗೆ ಮಾರ್ಗದರ್ಶನ ಮಾಡುತ್ತದೆ. ಮಾರ್ಗದರ್ಶನ ನಾವು ತೀವ್ರಗತಿಯಿಂದ ಸಾಗಬಹುದಾದ ಮಾರ್ಗಗಳ ಮೂಲಕ ಇರುತ್ತದೆ. ನಮ್ಮ ಸಾಗುವಿಕೆ ಪರಿಪೂರ್ಣತೆಯತ್ತ ಪ್ರಗತಿಪರವಾಗಿ ಹೆಜ್ಜೆ ಇಡುವುದಾಗಿರುತ್ತದೆ. ಆ ಪರಿಪೂರ್ಣತೆ ಯಾವಾಗಲೂ ಸಾಪೇಕ್ಷವಾದದ್ದು, ಯಾವಾಗಲೂ ಅದನ್ನು ಅತಿಶಯಿಸಬೇಕಾಗುತ್ತದೆ.

**– ಶ್ರೀಮಾತೆ**

*

## ಹೊಡೆತಗಳಿಂದ ಮನುಷ್ಯ ಕಲಿಯಬೇಕಾದದ್ದು ಏನು?

ಅದು ಮನುಷ್ಯ ಸರಿಯಾಗಿಯೇ ಪಡೆಯಬಹುದಾದ ಅನುಭವ. ಏನನ್ನೂ ತಿಳಿದುಕೊಂಡಿರದ ಮನುಷ್ಯರು ತಮ್ಮನ್ನು ಬಹಳ ಕಠಿಣ ತೊಂದರೆಗಳಿರುವ ಪರಿಸ್ಥಿತಿಗಳಲ್ಲಿ ಕಂಡುಕೊಂಡಾಗ ಇಲ್ಲವೆ ಪರಿಹರಿಸಬೇಕಾದ ಸಮಸ್ಯೆ ಎದುರಾದಾಗ ಇಲ್ಲವೆ ಇದೀಗ ನಾನು ಹೇಳಿದಂತೆ ಪ್ರಚೋದನೆಯೊಂದರ ಮೇಲೆ ಇಲ್ಲವೆ ಅವರನ್ನು ಕ್ಷೋಭೆಗೊಳಪಡಿಸಿದ ಏನೋ ಒಂದರ ಮೇಲೆ ಜಯ ಸಾಧಿಸಬೇಕಾದಾಗ ಅವರು ತಮ್ಮನ್ನು ಕಳೆದುಕೊಂಡಿರುವ ಅರಿವು ಪಡೆಯುತ್ತಾರೆ, ಏನು ಮಾಡಬೇಕೆಂಬುದು ಅವರಿಗೆ ತಿಳಿದಿರುವುದಿಲ್ಲ. ಅವರ ಮನಸ್ಸಾಗಲಿ ಇಲ್ಲವೆ ಸಂಕಲ್ಪವಾಗಲಿ ಇಲ್ಲವೆ ಭಾವನೆಯಾಗಲಿ ಸಹಾಯಕ್ಕೆ ಬರುವುದಿಲ್ಲ. ಆಗ ಏನೋ ಒಂದು ಸಂಭವಿಸುತ್ತದೆ. ಅವರ ಅಂತರಂಗದಲ್ಲಿ 'ಕರೆ' ಎಂದು ಕರೆಯಬಹುದಾದ ಏನೋ ಒಂದಿರುತ್ತದೆ. ಮನುಷ್ಯ ಕೈಕೊಳ್ಳಲಾಗದುದಕ್ಕಾಗಿ ಕೈಕೊಳ್ಳಬಹುದಾದುದಕ್ಕೆ

ಒಂದು ಕರೆ. ತನಗೆ ಸಾಧ್ಯವಾಗದಿದ್ದುದನ್ನು ಕೈಕೊಳ್ಳಲು ಸಮರ್ಥವಾದ ಏನೋ ಒಂದನ್ನು ಕುರಿತು ಮನುಷ್ಯ ಅಭೀಪ್ಸೆ ಪಡುತ್ತಾನೆ.

ಇದು ಮೊದಲನೆಯ ನಿಬಂಧನೆ. ಮತ್ತು ನಂತರ, ನಿಮ್ಮನ್ನು ನೀವು ಕಂಡುಕೊಂಡ ಪರಿಸ್ಥಿತಿಯಿಂದ ದೈವೀಕೃಪೆ ಮಾತ್ರ ಹೊರಗೆಳೆಯಬಲ್ಲದು, ನಿಮಗೆ ಪರಿಹಾರ ಒದಗಿಸಬಲ್ಲದು, ಮತ್ತು ಅದರಿಂದ ಹೊರಬರಲು ಬಲಕೊಡಬಲ್ಲದು ಎಂಬ ಅರಿವನ್ನು ನೀವು ಪಡೆದರೆ, ಆಗ ಬಹಳ ಸ್ವಾಭಾವಿಕವಾಗಿ ನಿಮ್ಮಲ್ಲಿ ಗಾಢ ಅಭೀಪ್ಸೆ ಎಚ್ಚೆತ್ತುಕೊಳ್ಳುವುದು, ತೆರೆದಿರಿಸಿಕೊಂಡ, ರೂಪ ಪರಿವರ್ತನೆ ಪಡೆದ ಪ್ರಜ್ಞೆಯಿರುವುದು. ನೀವು ಕರೆ ಕೊಟ್ಟರೆ, ಅಭೀಪ್ಸೆ ಪಟ್ಟರೆ ಮತ್ತು ಉತ್ತರ ಬರುವುದೆಂದು ಭರವಸೆ ಹೊಂದಿದ್ದರೆ, ನೀವು ಬಹಳ ಸ್ವಾಭಾವಿಕವಾಗಿ ದೈವೀಕೃಪೆಗೆ ನಿಮ್ಮನ್ನು ತೆರೆದಿರಿಸಿಕೊಳ್ಳುವಿರಿ.

ನಂತರ – ನೀವು ಇದಕ್ಕೆ ಬಹಳ ಲಕ್ಷ್ಯ ಕೊಡಬೇಕು (ಶ್ರೀಮಾತೆಯವರು ತುಟಿಯ ಮೇಲೆ ಬೆರಳಿಟ್ಟು ಸಂಜ್ಞೆ ಮಾಡಿ ತೋರಿಸುತ್ತಾರೆ) – ದೈವೀಕೃಪೆ ನಿಮಗೆ ಉತ್ತರ ನೀಡುವುದು, ತೊಂದರೆಯಿಂದ ದೈವೀಕೃಪೆ ನಿಮ್ಮನ್ನು ಹೊರಗೆಳೆಯುವುದು, ನಿಮ್ಮ ಸಮಸ್ಯೆಗೆ ಪರಿಹಾರ ನೀಡುವುದು, ಇಲ್ಲವೆ ನಿಮ್ಮ ತೊಂದರೆಗಳಿಂದ ಹೊರಬರಲು ಸಹಾಯ ಮಾಡುವುದು. ಆದರೆ ಒಮ್ಮೆ ಆತಂಕದಿಂದ ಮುಕ್ತರಾದಾಗ, ತೊಂದರೆಯಿಂದ ಹೊರಬಂದಾಗ ಅದನ್ನು ದೈವೀಕೃಪೆ ಮಾಡಿತೆಂಬುದನ್ನು ಮರೆಯದಿರಿ, ಅದನ್ನು ನೀವೇ ಮಾಡಿರುವಿರೆಂದು ಯೋಚಿಸದಿರಿ, ಏಕೆಂದರೆ ಇದು ನಿಜವಾಗಿ ಮಹತ್ವದ ವಿಷಯ. ಬಹಳಷ್ಟು ಜನರು ಆತಂಕ ಮಾಯವಾದಾಗ "ಒಟ್ಟಿನಲ್ಲಿ ನಾನೇ ತೊಂದರೆಯಿಂದ ಬಹಳ ಚೆನ್ನಾಗಿ ಹೊರಗೆ ಬಂದೆ" ಎಂದು ಹೇಳುತ್ತಾರೆ.

ಇರುವ ವಿಷಯ ಅದೇ. ಮತ್ತು ನಂತರ ನೀವು ಬಾಗಿಲಿಗೆ ಬೀಗ ಹಾಗೂ ಅಗಳಿ ಹಾಕುತ್ತೀರಿ, ಹೆಚ್ಚಿನದೇನನ್ನೂ ದೊರಕಿಸಲು ಶಕ್ತರಾಗುವುದಿಲ್ಲ. ಈ ಬಗೆಯ ಆಂತರಿಕ ಮೂರ್ಖತನ ಬಿಟ್ಟುಹೋಗಲು ಮತ್ತೊಮ್ಮೆ ನಿಮಗೆ ಕಡು ಸಂಕಟವೊಂದು, ಇಲ್ಲವೆ ಭಯಾನಕ ತೊಂದರೆಯೊಂದು ಬೇಕಾಗುತ್ತದೆ. ಏಕೆಂದರೆ ನೀವು ಸಾಮರ್ಥ್ಯರಹಿತರಾಗಿದ್ದೀರಿ ಎಂಬುದರ ಅರಿವು ಪಡೆದಾಗ ಮಾತ್ರ ಸ್ವಲ್ಪ ತೆರೆದಿರಿಸಿಕೊಂಡವರು, ನಮ್ರರು ಆಗಲು ಪ್ರಾರಂಭಿಸುತ್ತೀರಿ. ನೀವು ಕೈಕೊಳ್ಳುವುದೆಲ್ಲ ನಿಮ್ಮ ಕೌಶಲ, ಕ್ಷಮತೆಗಳ ಮೇಲೆ ಅವಲಂಬಿಸಿದೆ ಎಂದು ಯೋಚಿಸುತ್ತಿರುವವರೆಗೆ, ನಿಜವಾಗಿ ಒಂದು ಬಾಗಿಲನ್ನು ಮುಚ್ಚಿಬಿಡುತ್ತೀರಿ ಅಷ್ಟೇ



ಅಲ್ಲದೆ ಒಂದರ ನಂತರ ಒಂದರಂತೆ ಹಲವಾರು ಬಾಗಿಲುಗಳನ್ನು ಮುಚ್ಚಿಬಿಡುತ್ತೀರಿ, ಅಲ್ಲಿ ಬೇರೇನೂ ಪ್ರವೇಶಿಸಲಾರದು. ಅದೊಂದು ದೊಡ್ಡ ಅನನುಕೂಲತೆ. ಮನುಷ್ಯ ಬಹಳ ಬೇಗ ಮರೆತುಬಿಡುತ್ತಾನೆ. ಬಹಳ ಸ್ವಾಭಾವಿಕವಾಗಿ ತನ್ನದೇ ಕ್ಷಮತೆಯನ್ನು ಕುರಿತು ಸಮಾಧಾನದಿಂದಿರುತ್ತಾನೆ.

**ಪ್ರಶ್ನೆ :** *ಆದರೆ ಶ್ರೀಮಾತೆಯವರೆ, ಮನುಷ್ಯ ತಾನು ಸಮರ್ಥಹೀನ ಎಂಬುದನ್ನು ತಿಳಿದಿದ್ದರೂ ಅವನಲ್ಲಿ ತಾನು ಸಮರ್ಥನೆಂಬ ಭಾವನೆ ಕೊಡುವ ಏನೋ ಒಂದು ಇರುತ್ತದೆ, ಹಾಗಾಗಿ... ?*

**ಶ್ರೀಮಾತೆ :** ಅಹಾ ಹೌದು, ಅಹಾ ನಿಷ್ಕಪಟನಾಗುವುದು ಬಹಳ ಕಠಿಣ, ಆ ಕಾರಣದಿಂದಾಗಿಯೆ ಹೊಡೆತಗಳು ಹೆಚ್ಚಾಗುತ್ತವೆ, ಕೆಲವೊಮ್ಮೆ ಭಯಾನಕ–ವಾಗುತ್ತವೆ, ಏಕೆಂದರೆ ಅದೊಂದೇ ನಿಮ್ಮ ಮೂರ್ಖತನವನ್ನು ತೊಡೆದುಹಾಕ–ಬಲ್ಲದು. ಅನಾಹುತಗಳಿಗೆ ಇದೇ ಸಮರ್ಥನೆ ನೀಡುತ್ತದೆ. ತೀಕ್ಷ್ಣವಾದ ನೋವಿರುವ ಪರಿಸ್ಥಿತಿಯಲ್ಲಿ ನೀವಿದ್ದಾಗ ಮತ್ತು ನಿಜವಾಗಿ ಏನೋ ಒಂದು ನಿಮ್ಮ ಮೇಲೆ ಆಳವಾದ ಪರಿಣಾಮ ಬೀರುವಂತಾಗುವ ಮೊದಲು ಅದು ನಿಮ್ಮ ಮೂರ್ಖತನ ಸ್ವಲ್ಪ ಕರಗುವಂತೆ ಮಾಡುವುದು. ಆದರೆ ನೀನು ಹೇಳುವ ಹಾಗೆ ಕರಗುತ್ತಿರುವ ಏನೋ ಒಂದಿದ್ದರೂ ಅಲ್ಲಿ ಇನ್ನೂ, ಒಳಗೆ ಉಳಿದುಕೊಳ್ಳುವ ಏನೋ ಒಂದಿರುತ್ತದೆ. ಆ ಕಾರಣದಿಂದಾಗಿಯೇ ಅದು ಬಹಳ ಕಾಲ ಉಳಿದುಕೊಳ್ಳುತ್ತದೆ.

ಮನುಷ್ಯ ತನ್ನ ಆಳಗಳಲ್ಲಿ ತಾನೇನೋ ಆಗಿರುವುದಿಲ್ಲ, ತಾನೇನೂ ಮಾಡಲಾರ, ತಾನು ಅಸ್ತಿತ್ವದಲ್ಲಿಯೇ ಇಲ್ಲ, ತಾನೇನೂ ಅಲ್ಲ, ದೈವೀ ಪ್ರಜ್ಞೆ, ಕೃಪೆಗಳಿಲ್ಲದೆ ಯಾವುದೂ ಅಸ್ತಿತ್ವದಲ್ಲಿರುವುದಿಲ್ಲ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಎಷ್ಟು ಹೊಡೆತಗಳ ಆವಶ್ಯಕತೆ ಇರುತ್ತದೆ? ಅದನ್ನು ತಿಳಿದುಕೊಂಡ ಕ್ಷಣದಿಂದ ಅದು ಮುಗಿದುಹೋಗುತ್ತದೆ, ಎಲ್ಲ ತೊಂದರೆಗಳು ಹೋಗಿಬಿಟ್ಟಿರುತ್ತವೆ. ಅದನ್ನು ಸಮಗ್ರವಾಗಿ ತಿಳಿದುಕೊಂಡಾಗ ಪ್ರತಿರೋಧ ಒಡ್ಡುವುದು ಯಾವುದೂ ಇಲ್ಲದೆ ಇದ್ದಾಗ... ಆ ಕ್ಷಣ ಬರುವವರೆಗೆ... ಮತ್ತು ಅದಕ್ಕೆ ಬಹಳ ಕಾಲ ಬೇಕಾಗುತ್ತದೆ.

**ಪ್ರಶ್ನೆ :** *ಆ ಹೊಡೆತ ಒಮ್ಮೆಗೆ ಏಕೆ ಬರುವುದಿಲ್ಲ?*

**ಶ್ರೀಮಾತೆ :** ಏಕೆಂದರೆ ಅದು ನಿನ್ನನ್ನು ಕೊಂದುಬಿಡಬಹುದು. ನಿನ್ನನ್ನು ವಾಸಿಮಾಡುವಷ್ಟು ಹೊಡೆತ ಸಾಕಷ್ಟು ಬಲವಂತವಾಗಿದ್ದರೆ ಅದು ನಿನ್ನನ್ನು ತುಳಿದು

ಹಾಕಬಹುದು, ಅದು ನಿನ್ನನ್ನು ತಿರುಳ(pulp)ನ್ನಾಗಿ ಮಾಡಿಬಿಡಬಹುದು. ಸ್ವಲ್ಪ, ಸ್ವಲ್ಪವಾಗಿ ಬಹಳ ಕ್ರಮೇಣ ಮುಂದುವರಿಯುವುದರ ಮೂಲಕ, ನೀನು ಅಸ್ತಿತ್ವದಲ್ಲಿರುವುದನ್ನು ಮುಂದುವರಿಸಿಕೊಂಡು ಹೋಗಬಹುದು. ಸ್ವಾಭಾವಿಕವಾಗಿ ಇದು ಆಂತರಿಕ ಬಲದ ಮೇಲೆ, ಆಂತರಿಕ ನಿಷ್ಕಾಪಟ್ಯ, ಪ್ರಗತಿಗಾಗಿ ಕ್ಷಮತೆ, ಅನುಭವದಿಂದ ಲಾಭ ಪಡೆಯುವಿಕೆ ಮತ್ತು ಸ್ವಲ್ಪ ಸಮಯದ ಹಿಂದೆ ನಾನು ಹೇಳಿದ ಹಾಗೆ ಮರೆಯದಿರುವಿಕೆ ಇವೆಲ್ಲವುಗಳ ಮೇಲೆ ಅವಲಂಬಿಸಿರುತ್ತದೆ. ಮನುಷ್ಯ ಮರೆತುಬಿಡದೆ ಇರುವಷ್ಟು ಸುದೈವಿಯಾಗಿದ್ದರೆ ಬಹಳ ತೀವ್ರಗತಿಯಿಂದ ಸಾಗಿ ಹೋಗಬಲ್ಲ. ಮತ್ತು ಅದೇ ಕಾಲಕ್ಕೆ ಮನುಷ್ಯನಲ್ಲಿ ಆಂತರಿಕ ನೈತಿಕ ಶಕ್ತಿ ಇದ್ದರೆ, ಅದು ಕಾದು ಕೆಂಪಗಾಗಿರುವ ಕಬ್ಬಿಣದ ತುಂಡು ಕೈಯಲ್ಲಿದ್ದಾಗ ಅದರ ಮೇಲೆ ನೀರು ಚೆಲ್ಲಿ ಶಾಂತಗೊಳಿಸಲು ಬರದೆ ಇದ್ದ ಹಾಗೆ, ಕೀವು ತುಂಬಿದ ಗಾಯದ ವರೆಗೆ ಶಾಖ ಇಳಿದು ಹೋಗುವ ಹಾಗೆ, ವಿಷಯಗಳು ಬಹಳ ತೀವ್ರಗತಿಯಿಂದ ಸಾಗಿ ಹೋಗಬಲ್ಲವು. ಎಷ್ಟೊಂದು ಕ್ಷುದ್ರ, ಚಿಕ್ಕ ವಿವರಣೆಗಳನ್ನು ಮನುಷ್ಯ ತನಗೇ ಕೊಟ್ಟುಕೊಳ್ಳುತ್ತಾನೆ, ಎಷ್ಟೊಂದು ನೆಪಗಳನ್ನು ತಾನು ಮಾಡಿದ ಮೂರ್ಖತನದ ಕಾರ್ಯಗಳಿಗಾಗಿ ಕೂಡಿ ಹಾಕುತ್ತಾನೆ.

**ಪ್ರಶ್ನೆ** : *ಮಧುರ ಮಾತೆಯವರೆ, ಹೊಡೆತಗಳ ಸಂಖ್ಯೆ ಜನರ ಮೇಲೆ ಅವಲಂಬಿಸಿರುತ್ತದೆಯೆ?*

**ಶ್ರೀಮಾತೆ** : ಹೌದು, ಅದು ಜನರ ಮೇಲೆ ಅವಲಂಬಿಸಿರುತ್ತದೆ. ನಾನು ಹೇಳಿದ ಹಾಗೆ ಪ್ರಗತಿಗಾಗಿ ಇರುವ ಅವರ ಕ್ಷಮತೆ, ಬಲ ಮತ್ತು ಅವರ ಪ್ರತಿರೋಧ ಇವುಗಳ ಮೇಲೆ ಅದು ಅವಲಂಬಿಸಿರುತ್ತದೆ. ಹೊಡೆತಗಳ ಆವಶ್ಯಕತೆ ಇಲ್ಲದೇ ಇರುವ ಜನರು ನನಗೆ ಪರಿಚಿತರಾದವರಲ್ಲಿ ಅತಿ ಕಡಿಮೆ ಸಂಖ್ಯೆಯಲ್ಲಿದ್ದಾರೆ.

**ಪ್ರಶ್ನೆ** : *ಶ್ರೀಮಾತೆಯವರೆ, ಹೊಡೆತ ಮಹಾಕಾಳಿಯದಾಗಿರುತ್ತದೆಯೆ?*

**ಶ್ರೀಮಾತೆ** : ಹೊಡೆತವೇ? ಅವಶ್ಯವೆಂದಾಗಿ ಅಲ್ಲ.

ನೀವು ವಿಷವನ್ನು ನುಂಗಿ ಅದರ ಪ್ರಭಾವಕ್ಕೀಡಾದರೆ, ಅದು ಮಹಾಕಾಳಿಯ ತಪ್ಪಾಗುವುದಿಲ್ಲ. ವಿಷವನ್ನು ನುಂಗಿದವರು ನೀವೇ ಆಗಿರುತ್ತೀರಿ. ಮನುಷ್ಯ ಸಂಪೂರ್ಣವಾಗಿ ಹಾಸ್ಯಾಸ್ಪದವಾಗಿರುವ ಪರಿಸ್ಥಿತಿಗಳಲ್ಲಿ ತನ್ನನ್ನಿರಿಸಿಕೊಂಡರೆ ಅವನು ತನ್ನ ಶಿರವನ್ನೋ, ಬೆನ್ನನ್ನೋ, ತೋಳನ್ನೋ ಮುರಿದುಕೊಳ್ಳುವ ಸ್ಥಿತಿಯಲ್ಲಿರುವುದು ಖಂಡಿತ; ಏಕೆಂದರೆ ನೀವು ನಿಜವಾದ ಸಮತೋಲನದ



ಸ್ಥಿತಿಯಲ್ಲಿರುವುದಿಲ್ಲ, ನೀವು ದೈವೀ ಶಕ್ತಿಗಳನ್ನು ದೂಷಿಸಲಾಗದು. ಅದು ಮೂರ್ಖತನದ ಕಾರ್ಯ ಮಾಡಿದುದರ, ಆಂತರಿಕ ಸ್ಥಿತಿಯ ಸಾಮಾನ್ಯ ಯಾಂತ್ರಿಕ ಪರಿಣಾಮ.

**ಪ್ರಶ್ನೆ** : *ಮಹಾಕಾಳಿಯ ಹೊಡೆತದ ಸ್ವರೂಪ ಹೇಗಿರುತ್ತದೆ?*

**ಶ್ರೀಮಾತೆ** : ಅದರಿಂದ ನಿಮಗೆ ಬಹಳ ಸಂತೋಷವಾಗುತ್ತದೆ, ನಿಮಗೆ ಬಹಳ ಸಮಾಧಾನವಾಗುತ್ತದೆ.

**ಪ್ರಶ್ನೆ** : *ಮನುಷ್ಯ ಅದಕ್ಕಾಗಿ ಅಭೀಪ್ಸೆ ಪಡಬೇಕಾಗುತ್ತದೆಯೆ? ಇಲ್ಲವೆ ಅದು ಸ್ವಾಭಾವಿಕವಾಗಿ ಬರುತ್ತದೆಯೆ?*

**ಶ್ರೀಮಾತೆ** : ಹೌದು, ಅಭೀಪ್ಸೆ ಪಡುವುದರಲ್ಲಿ ಮನುಷ್ಯ ನಿಷ್ಕಪಟನಾಗಿರಬೇಕು, ಪ್ರಗತಿಯನ್ನು ನಿಜವಾಗಿ ಬಯಸಬೇಕು. "ಹೌದು, ನಾನು ಪ್ರಗತಿ ಸಾಧಿಸುವುದನ್ನು ಬಯಸುತ್ತೇನೆ" ಎಂದು ನಿಷ್ಕಪಟತನದಿಂದ ನಿಜವಾಗಿ ಹೇಳಬೇಕು.... "ಏನೇ ಸಂಭವಿಸಲಿ, ನಾನು ಪ್ರಗತಿ ಸಾಧಿಸುವುದನ್ನು ಬಯಸುತ್ತೇನೆ". ಆಗ ಅದು ಬರುತ್ತದೆ.

ಆದರೆ, ನಾನು ಹೇಳಿದ ಹಾಗೆ, ಅದು ಪೂರ್ಣತೆಯಿರುವ ಸಾಮರ್ಥ್ಯವೊಂದರಿಂದ ಬರುತ್ತದೆ, ಅದು ಗಾಢ ಸಂತೋಷವನ್ನು ಹಿಡಿದಿಟ್ಟುಕೊಂಡಿರುತ್ತದೆ. ಮನುಷ್ಯ ನಿರ್ಣಯವೊಂದನ್ನು ಮಾಡಿದಾಗ, ತನ್ನಲ್ಲಿರುವ ಏನೋ ಒಂದನ್ನು ನಿಲ್ಲಿಸಬೇಕೆಂದುಕೊಂಡಾಗ, ತಾನು ಮಾಡಿದ್ದ ಮೂರ್ಖತನವನ್ನು ಪುನರಾವರ್ತಿಸಬಾರದು ಎಂದುಕೊಂಡಾಗ, ಮಾಡಲೇ ಬೇಕಾಗಿದೆ ಎಂದು ಮನುಷ್ಯ ತಿಳಿದುಕೊಂಡಿದ್ದರೂ ಅದನ್ನು ಕೈಕೊಳ್ಳುವುದು ಅಸಾಧ್ಯ ಇಲ್ಲವೆ ಬಹಳ ಕಷ್ಟಕರ ಎಂದು ಕಂಡುಕೊಂಡಾಗಲೂ ಕೈಕೊಳ್ಳಲೇಬೇಕೆಂದು ತನ್ನ ಸಂಕಲ್ಪದ ನಿಷ್ಕಾಪಟ್ಯವನ್ನು ಇರಿಸಿದಾಗ, ನೀವು ನಿರ್ಧರಿಸಿದ್ದನ್ನು ಮಾಡುವಂತೆ ಒತ್ತಾಯ ತರಲು ಭಯಾನಕ ಹೊಡೆತ ಬಂದರೆ, ಅದು ಹೊಡೆತವೇ ಆಗಿರುತ್ತದೆ, ಆದರೆ ನಿಮ್ಮನ್ನು ವೈಭವೀಕರಿಸಿಕೊಂಡ ಭಾವನೆ ನಿಮಗೆ ಬರುತ್ತದೆ, ನೀವು ಬಹಳ ಸಂತೋಷದಿಂದಿರುತ್ತೀರಿ. ಅದು ಶೋಭಾಯಮಾನವಾದದ್ದು, ಹೃದಯದಲ್ಲಿ ಶೋಭಾಯಮಾನವಾಗಿರುವ ಏನೋ ಒಂದರ ಭಾವನೆ ಇರುತ್ತದೆ. (ಶ್ರೀಮಾತೆಯವರು ಹೃದಯದತ್ತ ಬೆರಳು ಮಾಡಿ ತೋರಿಸುತ್ತಾರೆ.)

ನೀವು ಕೇವಲ ಬಾಹ್ಯ, ಯಾಂತ್ರಿಕ, ಭೌತಿಕ ಪ್ರಜ್ಞೆಯಲ್ಲಿದ್ದಾಗ, ಅಜ್ಞಾನದ ಸ್ಥಿತಿಯಲ್ಲಿದ್ದಾಗ ಅದು ನಿಮ್ಮಿಂದ ಎಲ್ಲ ಬಗೆಯ ಮೂರ್ಖತನದ ಕಾರ್ಯಗಳು ಆಗುವಂತೆ ಮಾಡುತ್ತದೆ, ಅವು ಅನಿವಾರ್ಯವಾಗಿ ಹಾಗೂ ಸ್ವಾಭಾವಿಕವಾಗಿ ತಮ್ಮ ಅನಿಷ್ಟ ಪರಿಣಾಮಗಳು ನಿಮ್ಮೆಡೆಗೆ ಬರುವಂತೆ ಮಾಡುತ್ತವೆ. ಇದು ಹಾಗಿರುವಾಗ ನಿಮ್ಮ ಮೇಲೆ ಪ್ರಭುತ್ವ ಪಡೆಯಬೇಕೆಂದು, ಎಷ್ಟೇ ಬೆಲೆ ತೆತ್ತಾದರೂ ದೈವೀ ಸತ್ಯದ ಪ್ರಜ್ಞೆಯಲ್ಲಿರಬೇಕೆಂದು, ಪ್ರಗತಿಗಾಗಿ ಕೊಡಬೇಕಾದ ಬೆಲೆ ಎಷ್ಟೇ ಇರಲಿ ಪ್ರಗತಿ ಸಾಧಿಸಬೇಕೆಂದು ನೀವು ನಿರ್ಧರಿಸಿದಾಗ, ಒಟ್ಟಿನಲ್ಲಿ ನೀವು ಮೇಲೆ ಏರಿ ಹೋಗುವ ಉಚ್ಚತರ ಸ್ಥಿತಿಯಿರುತ್ತದೆ. ಆ ಅನಿಷ್ಟ ಪರಿಣಾಮಗಳು ಹಾಗೂ ಈ ಸ್ಥಿತಿ ಇವುಗಳ ನಡುವೆ ಅಪಾರ ವ್ಯತ್ಯಾಸವಿರುತ್ತದೆ. ಉಚ್ಚತರ ಸ್ಥಿತಿಯಲ್ಲಿ ನಿಮಗೆ ಸಂಭವಿಸುವ ವಿಷಯಗಳು ಅರ್ಥಪೂರ್ಣವಾಗಿರುತ್ತವೆ, ಅವುಗಳಲ್ಲಿ ನೀವು ಸ್ಪಷ್ಟವಾಗಿ ಆ ಹೊಳೆಯುವ ಸತ್ಯವನ್ನು, ಮಾರ್ಗದಲ್ಲಿ ನಿಮಗೆ ಜ್ಞಾನೋದಯವನ್ನುಂಟು ಮಾಡುವ ಪ್ರಕಾಶವನ್ನು ನೋಡುತ್ತೀರಿ, ಆ ಪ್ರಕಾಶ ಒಂದು ಸಂಕೇತ ರೂಪದಲ್ಲಿ ನಿಮಗೆ ಮಾರ್ಗದರ್ಶನ ಮಾಡುತ್ತದೆ.... ನೀವು ಎಷ್ಟೊಂದು ಸ್ಪಷ್ಟವಾಗಿ ನೋಡುವಿರಿ! ಅದು ಇನ್ನುಮುಂದೆ, ಕಲ್ಲಿನ ಬಂಡೆ ಬೆನ್ನಮೇಲೆ ಬಿದ್ದು ಮುರಿದು ಹಾಕುವಂತೆ ನಿಮ್ಮನ್ನು ತುಳಿದುಹಾಕುವ ಏನೋ ಒಂದಾಗಿರುವುದಿಲ್ಲ. ಅದು ಪರವಶಗೊಳಿಸುವ ಉಜ್ವಲತೆಯಾಗಿರುತ್ತದೆ.

ಆ ಕಾರಣದಿಂದಾಗಿಯೆ ಮೊದಲನೆಯ ಹೆಜ್ಜೆಗೆ ಪ್ರಯತ್ನದ ಆವಶ್ಯಕತೆ ಇರುತ್ತದೆಂದು ಮನುಷ್ಯ ಹೇಳುತ್ತಾನೆ. ಮೊದಲನೆಯ ಹೆಜ್ಜೆ ಎಂದರೆ ಆ ಕೆಳಗಿನ ಸ್ಥಿತಿಯಿಂದ ಉಚ್ಚತರ ಸ್ಥಿತಿಗೆ ಮೇಲಕ್ಕೇರಿ ಹೋಗುವುದಾಗಿದೆ. ಅದರ ನಂತರ ಪ್ರತಿಯೊಂದೂ ಬದಲಾಗುತ್ತದೆ.

ಆದರೆ ಮನುಷ್ಯ ಆ ಕೆಳಗಿನ ಹಂತದಿಂದ ಸಂಪೂರ್ಣವಾಗಿ ಮೇಲೆದ್ದುಬರಬೇಕು, ಅಲ್ಲಿಯೇ ಅವನು ಉಳಿದುಕೊಳ್ಳಬಾರದು. ಒಂದು ಹೆಜ್ಜೆಯನ್ನು ಅಲ್ಲಿ ಇನ್ನೊಂದು ಹೆಜ್ಜೆಯನ್ನು ಇಲ್ಲಿ ಇಡಲು ಪ್ರಯತ್ನಿಸಬಾರದು, ಅದು ಉಪಯುಕ್ತವಾಗಲಾರದು.

**ಪ್ರಶ್ನೆ :** *ಮಧುರ ಮಾತೆಯವರೆ, ನಾವು ಒಂದು ತೊಂದರೆಯನ್ನು ಎದುರಿಸುತ್ತಿರುವಾಗ ಅದರರ್ಥ ನಮ್ಮ ಸ್ವಭಾವದಲ್ಲಿರುವ ದೋಷಗಳ ಬಗ್ಗೆ ಭಗವಂತ ನಾವು ಅರಿವುಳ್ಳವರಾಗಲೆಂದು ಪ್ರಯತ್ನಿಸುತ್ತಾನೆಯೆ?*



**ಶ್ರೀಮಾತೆ :** ನೀವು ಆ ತೊಂದರೆಯನ್ನು ಎದುರಿಸುತ್ತಿರುವಿರಾದರೆ ಹೌದು, ಎಂದರೆ ನಿಮಗೆ ಒಂದು ತೊಂದರೆ ಎದುರಾದ ತಕ್ಷಣ, ನೀವು ಹೇಡಿಯಂತೆ ಅದನ್ನು ಬಿಟ್ಟುಕೊಟ್ಟು ಓಡಿ ಹೋಗುವುದರ ಬದಲಾಗಿ ಅದರ ಮೇಲೆ ಜಯ ಸಾಧಿಸಲು ಪ್ರಯತ್ನಿಸಿದಾಗ ಭಗವಂತ ನಿಮ್ಮ ಹಿಂದೆ ಇರುತ್ತಾನೆ ಎಂಬುದರ ಬಗ್ಗೆ ನಿಶ್ಚಿಂತೆಯಿಂದ ಇರಬಹುದು. ನೀವು ಹೇಡಿಗಳಾದರೆ ಭಗವಂತ ಅಲ್ಲಿರುವುದಿಲ್ಲ, ಎಂದರೆ ನಿಮ್ಮ ಹೇಡಿತನ ಭಗವಂತನೊಡನಿರುವ ನಿಮ್ಮ ಸಂಪರ್ಕವನ್ನು ಕಡಿದುಹಾಕುತ್ತದೆ. ನೀವು ಆ ತೊಂದರೆಯನ್ನು ವಿರೋಧಿಸಿದರೆ ಮತ್ತು ಜಯ ಸಾಧಿಸಲು ಬಯಸಿದರೆ ಆಗ ಭಗವಂತ ನಿಮಗೆ ಸಹಾಯ ಸಲ್ಲಿಸಲು ಅಲ್ಲಿರುತ್ತಾನೆ ಎಂಬುದು ನಿಶ್ಚಿತ. ಅದರಲ್ಲಿ ಸಂಶಯದ ಒಂದು ಛಾಯೆಯೂ ಇರುವುದಿಲ್ಲ.

**ಪ್ರಶ್ನೆ :** *ತೊಂದರೆ ಬಂದಾಗ, ನಮ್ಮಲ್ಲಿ ದೋಷಗಳಿವೆ ಎಂಬುದರ ಅರಿವನ್ನು ತಂದುಕೊಡುವುದಕ್ಕಾಗಿ ಭಗವಂತ ಪ್ರಯತ್ನ ಮಾಡುವನೇ ಎಂಬುದನ್ನು ನಾನು ತಿಳಿದುಕೊಳ್ಳಲು ಬಯಸುತ್ತೇನೆ.*

**ಶ್ರೀಮಾತೆ :** ಭಗವಂತ ಬೇಕೆಂದೇ ತೊಂದರೆಗಳನ್ನು ನಿನ್ನ ಮಾರ್ಗದಲ್ಲಿ ಇರಿಸುತ್ತಾನೆಂದು ನೀನು ತಿಳಿದುಕೊಂಡಿರುವೆಯಾ? ಇಲ್ಲ, ಅದು ಅವನ ರೀತಿಯಲ್ಲ.

**(6/322–26 461)** – **ಶ್ರೀಮಾತೆ**

*

## ಮೊಳೆಗಳ ಹಾಸಿಗೆಯ ಆಸರೆ ಪಡೆಯುವ ಸಾಧು

**ಪ್ರಶ್ನೆ :** ಇಲ್ಲಿ *ನೀವು ಹೇಳಿದ್ದು ಹೀಗಿದೆ: "ಸಾಧು ಮೊಳೆಗಳ ಹಾಸಿಗೆಯ ಆಸರೆ ಪಡೆಯುವುದು, ಕ್ರಿಶ್ಚಿಯನ್ ವಿರಕ್ತರು ಚಾಟಿಯ ಹಾಗೂ ಪ್ರಾಯಶ್ಚಿತ್ತಕ್ಕಾಗಿ ಬಳಸುವ ಕೂದಲಂಗಿಯ ಮೇಲೆ ಅವಲಂಬಿಸುವುದು ಇವು ಅಂಗೀಕರಿಸದ, ಅಂಗೀಕರಿಸಲಾಗದ, ಹೆಚ್ಚು ಕಡಿಮೆ ಅರೆಮರೆಯ ಹಿಂಸಾಸಕ್ತ ಪ್ರವೃತ್ತಿ; ಅದು ಅನಾರೋಗ್ಯಕರ ಅರಸುವಿಕೆ, ಇಲ್ಲವೆ ಹಿಂಸಾತ್ಮಕ ಸಂವೇದನೆಗಳಿಗಾಗಿ ಇರುವ ಅವಚೇತನದ ಆವಶ್ಯಕತೆ."*

**ಶ್ರೀಮಾತೆ :** ಅಹಾ! ಮೊಳೆಗಳ ಮೇಲೆ ಮಲಗಿಕೊಳ್ಳುವ ವಿರಕ್ತರಿರುತ್ತಾರೆಂಬುದು ನಿಮಗೆ ತಿಳಿದಿದೆ. ನೀವು ಅಂತಹರನ್ನು ಎಂದೂ ನೋಡಿಲ್ಲವೆ? ಅಂತಹರ ಕೆಲವು

ಛಾಯಾಚಿತ್ರಗಳನ್ನು ನಾನು ನೋಡಿದ್ದೇನೆ. ಅವರು ಮೊಳೆಗಳ ಹಾಸಿಗೆಯ ಮೇಲೆ ಮಲಗುತ್ತಾರೆ. ಇತ್ತೀಚೆಗೆ ಹಾಗೆ ಮಲಗಿಕೊಂಡವರ ಛಾಯಾಚಿತ್ರವನ್ನು ನೋಡಿದೆ. ಸರಿ, ಅವರು ಅದನ್ನೇಕೆ ಮಾಡುತ್ತಾರೆ, ತಮ್ಮ ಸಾಧುತ್ವವನ್ನು ಪ್ರಮಾಣೀಕರಿಸಲಿಕ್ಕಾಗಿ ಅವರು ಹಾಗೆ ಮಾಡುತ್ತಾರೆಯೋ ಎಂಬುದು ನನಗೆ ತಿಳಿಯದು. ಇದನ್ನು ಅವರು ಸಾರ್ವಜನಿಕರ ಎದುರಿನಲ್ಲಿ ಕೈಕೊಂಡರೆ ಅದು ಯಾವಾಗಲೂ ಸ್ವಲ್ಪ ನಟನೆಯದು ಎನ್ನುವ ಸಂಶಯ ಮೂಡುತ್ತದೆ. ಆದಾಗ್ಯೂ ಅದೊಂದು ಪ್ರದರ್ಶನದ ವಿಷಯವಲ್ಲ ಎನ್ನುವ ರೀತಿಯಲ್ಲಿ ನಿಷ್ಕಾಪಟ್ಯದಿಂದ ಕೈಕೊಳ್ಳುವವರಿದ್ದಾರೆ, ಅದನ್ನೇಕೆ ಮಾಡುತ್ತೀರಿ ಎಂದು ಕೇಳಿದಾಗ ಅವರು ತಮ್ಮ ದೇಹಕ್ಕೆ ತಾವು ಅಂಟಿಕೊಂಡಿಲ್ಲ ಎಂಬುದನ್ನು ತಮಗೆ ಸಿದ್ಧಪಡಿಸಿಕೊಳ್ಳಬೇಕಾಗಿರುತ್ತದೆ ಎಂದು ಹೇಳುತ್ತಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗುವ ಇನ್ನಿತರರಿದ್ದಾರೆ, ಆತ್ಮವನ್ನು ಮುಕ್ತಗೊಳಿಸುವುದಕ್ಕೆ ದೇಹವನ್ನು ವೇದನೆಗೊಳಪಡಿಸುವುದು ಅವಶ್ಯವಿದೆ ಎಂದು ಅವರು ಹೇಳುತ್ತಾರೆ. ಸರಿ, ನನ್ನನ್ನು ಕೇಳಿದಿರಾದರೆ, ಇದರ ಹಿಂದೆ ವೇದನೆಗಾಗಿ ಪ್ರಾಣಿಕ ಸ್ವಾದವಿದೆ, ಅದು ದೇಹದ ವೇದನೆಯನ್ನು ಹೇರುತ್ತದೆ, ಏಕೆಂದರೆ ಪ್ರಾಣಿಕ ವೇದನೆಯು ಬಹಳ ವಿರೂಪಗೊಂಡ ಇಂದ್ರಿಯ ಸುಖವನ್ನು ಕಂಡುಕೊಳ್ಳುತ್ತದೆ ಎಂದು ಹೇಳುತ್ತೇನೆ. ತಮಗೆ ತಾವೇ ಎಲ್ಲಿಯೋ ಗಾಯ ಮಾಡಿಕೊಂಡ ಮಕ್ಕಳ ಪರಿಚಯ ನನಗಿದೆ, ಕೆಲವರು ಗಾಯಗೊಂಡ ಭಾಗವನ್ನು ಸಾಧ್ಯವಿದ್ದಷ್ಟು ಒತ್ತಿಹಿಡಿದು ಗಾಯ ಇನ್ನೂ ಪ್ರಖರವಾಗುವಂತೆ ಮಾಡುತ್ತಿದ್ದರು, ಅವರು ಅದರಲ್ಲಿ ಸಂತೋಷ ಕಂಡುಕೊಳ್ಳುತ್ತಿದ್ದರು. ಆ ಬಗೆಯವರಾಗಿರುವ ವಯಸ್ಕರನ್ನೂ ನೋಡಿದ್ದೇನೆ. ನೈತಿಕವಾಗಿ ಅದು ಬಹಳ ಪ್ರಸಿದ್ಧಿ ಪಡೆದ ವಿಷಯ. ನಾನು ಜನರಿಗೆ "ನೀವು ಅಸಂತುಷ್ಟರಾಗಿದ್ದೀರಿ, ಏಕೆಂದರೆ ನೀವು ಅಸಂತೋಷವನ್ನು ಬಯಸುತ್ತೀರಿ, ನೀವು ವೇದನೆಗೆ ಒಳಗಾಗಿದ್ದರೆ ನಿಮಗೆ ವೇದನೆ ಇಷ್ಟವಾಗಿರುತ್ತದೆ. ಹಾಗಿಲ್ಲದಿದ್ದರೆ ನೀವು ವೇದನೆಗೆ ಒಳಗಾಗುವುದಿಲ್ಲ" ಎಂದು ಹೇಳುತ್ತ ಕಾಲಕಳೆಯುತ್ತೇನೆ. ಈ ಬಗೆಯದನ್ನು ಅನಾರೋಗ್ಯಕರ ಎಂದು ಕರೆಯುತ್ತೇನೆ, ಏಕೆಂದರೆ ಅದು ಸಾಮರಸ್ಯ ಹಾಗೂ ಸೌಂದರ್ಯಗಳ ವಿರುದ್ಧವಾಗಿರುತ್ತದೆ, ಅದು ಬಲವತ್ತರವಾದ ಸಂವೇದನೆಗಳಿಗೆ ಒಂದು ಬಗೆಯ ರೋಗಗ್ರಸ್ತ ಆವಶ್ಯಕತೆ.

ಅತ್ಯಂತ ಭಯಾನಕ ಚಿತ್ರಹಿಂಸೆಗಳನ್ನು ಅನ್ವೇಷಿಸಿದ ದೇಶ ಚೀನಾ ಎಂಬುದು ನಿಮಗೆ ಗೊತ್ತಿದೆಯೋ ಇಲ್ಲವೋ ಎಂಬುದು ನನಗೆ ತಿಳಿಯದು, ಅವು



ಯೋಚಿಸಲು ಯೋಗ್ಯವಲ್ಲದ ರೀತಿಯವಾಗಿರುತ್ತವೆ. ನಾನು ಜಪಾನಿನಲ್ಲಿದ್ದಾಗ ಚೀನಾ ದೇಶದವರನ್ನು ಬಹಳ ಮೆಚ್ಚಿಕೊಂಡಿದ್ದ (ಹೀಗೆ ಮೆಚ್ಚಿಕೊಳ್ಳುವುದು ಅಪರೂಪ) ಜಪಾನೀಯನೊಬ್ಬನನ್ನು ಅದಕ್ಕೆ ಕಾರಣವೇನೆಂದು ಕೇಳಿದೆ. "ಅದು ಹಾಗೇಕೆಂದರೆ ಜಪಾನೀಯರನ್ನೇ ಒಳಗೊಂಡ ಅತಿ ಪ್ರಾಚ್ಯ (far east) ದೇಶದ ಜನರಲ್ಲಿ ಬಹಳ ಮೊಂಡಾದ (blunt) ಸಂವೇದನಾಶೀಲತೆ ಇರುತ್ತದೆ. ಅವರು ಭಾವನೆಗೆ ತಂದುಕೊಳ್ಳುವುದು ಅತಿ ಅಲ್ಪ, ವೇದನೆ ಅತಿ ಬಲವತ್ತರವಾಗಿರದಿದ್ದರೆ, ಅವರು ಏನನ್ನೂ ಭಾವನೆಗೆ ತಂದುಕೊಳ್ಳುವುದಿಲ್ಲ. ಹಾಗಾಗಿ ಅವರು ತಮ್ಮ ಬುದ್ಧಿಮತ್ತೆಯನ್ನು ಉಪಯೋಗಿಸಿ ಅತ್ಯಂತ ತೀಕ್ಷ್ಣವಾದ ವೇದನೆಗಳನ್ನು ಅನ್ವೇಷಿಸುವಂತಾಗಿದೆ" ಎಂದು ಹೇಳಿದ. ಸರಿ, ಪ್ರಜ್ಞಾರಹಿತ ಈ ಎಲ್ಲ ಜನರು, ಹೆಚ್ಚು ಪ್ರಜ್ಞಾರಹಿತರಾದಾಗ, ತಾಮಸಿಕರಾದಾಗ, ಅವರ ಸಂವೇದನಾಶೀಲತೆ ಹೆಚ್ಚು ಮೊಂಡವಾದಾಗ, ಏನನ್ನಾದರೂ ಭಾವನೆಗೆ ತಂದುಕೊಳ್ಳುವುದಕ್ಕೆ ಬಲವತ್ತರವಾದ ಸಂವೇದನೆಗಳ ಆವಶ್ಯಕತೆ ಇರುತ್ತದೆ. ಮತ್ತು ಸಾಮಾನ್ಯವಾಗಿ ಇದೇ ಜನರನ್ನು ಕ್ರೂರರನ್ನಾಗಿ ಮಾಡುತ್ತದೆ, ಏಕೆಂದರೆ ಕ್ರೌರ್ಯ ಬಹಳ ಬಲವತ್ತರವಾದ ಸಂವೇದನೆಯನ್ನು ಉಂಟು ಮಾಡುತ್ತದೆ. ಯಾರೊಬ್ಬರ ಮೇಲೆ ಹೇರಲಾದ ವೇದನೆಯ ಮೂಲಕ ದೊರಕಿಸಿದ ನರಗಳ ಉದ್ವಿಗ್ನತೆ (nervous tension) ಸಂವೇದನೆಯನ್ನು ಕೊಡುತ್ತದೆ, ಭಾವನೆಗೆ ತಂದುಕೊಳ್ಳಲು ಅದರ ಆವಶ್ಯಕತೆ ಅವರಿಗಿರುತ್ತದೆ, ಹಾಗಿಲ್ಲದಿದ್ದರೆ ಅವರಿಗೆ ಯಾವ ಭಾವನೆಯೂ ಬರುವುದಿಲ್ಲ. ಹಾಗಾಗಿ ಒಂದು ಇಡೀ ಕುಲ ವಿಶೇಷವಾಗಿ ಕ್ರೂರವಾಗಿರುತ್ತದೆ. ಅವರು ಪ್ರಾಣಿಕವಾಗಿ ಬಹಳ ಪ್ರಜ್ಞಾರಹಿತರಾಗಿರುತ್ತಾರೆ. ಅವರು ಮಾನಸಿಕವಾಗಿ ಇಲ್ಲವೆ ಬೇರೆ ರೀತಿಯಲ್ಲಿ ಪ್ರಜ್ಞಾರಹಿತರಾಗಿರುವುದಿಲ್ಲ, ಆದರೆ ಅವರು ಪ್ರಾಣಿಕವಾಗಿ ಇಲ್ಲವೆ ಭೌತಿಕವಾಗಿ – ಒಟ್ಟಿನಲ್ಲಿ ಭೌತಿಕವಾಗಿ ಪ್ರಜ್ಞಾರಹಿತರಾಗಿರುತ್ತಾರೆ.

**(6/470–71)** **– ಶ್ರೀಮಾತೆ**

*

## ವೇದನೆಯ ಎರಡು ಬಗೆಗಳು

**ಪ್ರಶ್ನೆ :** *ವೇದನೆಯ ಮೇಲೆ ಜಯ ಸಾಧಿಸುವುದು ಹೇಗೆ?*

**ಶ್ರೀಮಾತೆ :** ಸಮಸ್ಯೆ ಅಷ್ಟು ಸರಳವಾಗಿಲ್ಲ. ವೇದನೆಗೆ ಕಾರಣಗಳು ಅಸಂಖ್ಯಾತ–ವಾಗಿವೆ ಮತ್ತು ಅದರ ಗುಣವೂ ಕೂಡ ಬಹಳಷ್ಟು ವ್ಯತ್ಯಾಸಕ್ಕೊಳಗಾಗುತ್ತದೆ

ಆದಾಗ್ಯೂ ವೇದನೆಯ ಮೂಲ ಒಂದೇ ಆಗಿದೆ ಮತ್ತು ಅದು ದೈವ ವಿರೋಧಿ ಸಂಕಲ್ಪದಿಂದ ಬರುತ್ತದೆ. ಇದನ್ನು ತಿಳಿದುಕೊಳ್ಳುವುದು ಹೆಚ್ಚು ಸುಲಭವಾಗಲೆಂದು ವೇದನೆಯನ್ನು ಎರಡು ಭಿನ್ನ ಬಗೆಗಳಲ್ಲಿ ವಿಭಜಿಸಬಹುದು, ಆದಾಗ್ಯೂ ಅವೆರಡೂ ಬಹಳಷ್ಟು ಸಲ ಮಿಶ್ರಣಕ್ಕೊಳಗಾಗಿರುತ್ತವೆ.

ಮೊದಲನೆಯದು ಕೇವಲ ಅಹಂಕಾರದಿಂದ ಕೂಡಿಕೊಂಡಿರುತ್ತದೆ, ಮನುಷ್ಯ ತನ್ನ ಹಕ್ಕುಗಳ ಉಲ್ಲಂಘನೆಯಾಗಿದೆ, ತನ್ನನ್ನು ಆವಶ್ಯಕತೆಗಳಿಂದ ವಂಚಿಸಲಾಗಿದೆ, ಕೊಳ್ಳೆ ಹೊಡೆಯಲಾಗಿದೆ, ತನ್ನ ಮನ ನೋಯಿಸಲಾಗಿದೆ, ತನಗೆ ದ್ರೋಹವಾಗಿದೆ ತನ್ನನ್ನು ಗಾಯಗೊಳಿಸಲಾಗಿದೆ ಇತ್ಯಾದಿ ಎಂಬ ಭಾವನೆ ತಂದುಕೊಳ್ಳುವುದರಿಂದ ಅವನಿಗೆ ವೇದನೆ ಆಗುತ್ತದೆ. ವೇದನೆಯ ಈ ಇಡೀ ಬಗೆ ಸ್ಪಷ್ಟವಾಗಿ ವಿರೋಧೀ ಕ್ರಿಯೆಯ ಪರಿಣಾಮವಾಗಿರುತ್ತದೆ ಮತ್ತು ಅದು ಪ್ರಜ್ಞೆಯಲ್ಲಿ ಶತ್ರುವಿನ ಪ್ರಭಾವಕ್ಕೆ ದ್ವಾರವನ್ನು ತೆರೆದಿರಿಸುತ್ತದೆ, ಅದು (ವೇದನೆ) ಜಗತ್ತಿನಲ್ಲಿ ಅವನ ಅತ್ಯಂತ ಸಾಮರ್ಥ್ಯಪೂರ್ಣವಾಗಿ ಕ್ರಿಯೆ ಕೈಕೊಳ್ಳುವ ರೀತಿಯಾಗಿದೆ, ಅದಕ್ಕೆ ಅಧಿಕವಾಗಿ ಅದರ ಸ್ವಾಭಾವಿಕ ಹಾಗೂ ಸ್ವಯಂಪ್ರೇರಣೆಯ ಪರಿಣಾಮಗಳಾದ ದ್ವೇಷ, ಬಲಿಷ್ಠರಾದವರಲ್ಲಿ ಸೇಡು ತೀರಿಸಿಕೊಳ್ಳುವ ಆಸೆ, ದುರ್ಬಲರಾದವರಲ್ಲಿ ನಿರಾಶೆ ಮತ್ತು ಮರಣ ಹೊಂದುವ ಬಯಕೆ ಇವು ಬಂದರೆ ಅದು ಎಲ್ಲದಕ್ಕಿಂತಲೂ ಹೆಚ್ಚು ಸಾಮರ್ಥ್ಯಪೂರ್ಣವಾಗುವುದು.

ವೇದನೆಯ ಇನ್ನೊಂದು ಬಗೆಯಿದೆ, ಅದರ ಪ್ರಾರಂಭದ ಕಾರಣ ವಿರೋಧಿ ಶಕ್ತಿ ಸೃಷ್ಟಿಸಿದ ಪ್ರತ್ಯೇಕತೆಯ ನೋವು. ಅದು ಸ್ವಭಾವದಲ್ಲಿ ಮೊದಲನೆಯ ವರ್ಗಕ್ಕೆ ತೀರಾ ವಿರುದ್ಧವಾಗಿದೆ. ಅದು ದೈವೀ ಕರುಣೆಯಿಂದ ಬರುವ ವೇದನೆ, ಜಗತ್ತಿನ ದುಃಖದ ಮೂಲ, ಕಾರಣ ಇಲ್ಲವೆ ಪರಿಣಾಮ ಏನೇ ಆಗಿದ್ದರೂ, ಆ ದುಃಖಕ್ಕಾಗಿ ಕರುಣೆಯ ಭಾವನೆ ತಂದುಕೊಳ್ಳುವುದರಿಂದ ಬರುವ ವೇದನೆ, ಕೇವಲ ಚೈತ್ಯಾತ್ಮಿಕ ಗುಣಲಕ್ಷಣವುಳ್ಳ ಈ ವೇದನೆಯಲ್ಲಿ ಅಹಂಕಾರ, ಸ್ವಾನುಕಂಪಗಳಿರುವುದಿಲ್ಲ, ಅದು ಶಾಂತಿ, ಬಲ, ಮತ್ತು ಕ್ರಿಯೆಗಾಗಿ ಸಾಮರ್ಥ್ಯ, ಭವಿಷ್ಯತ್ತಿನಲ್ಲಿ ನಂಬಿಕೆ, ವಿಜಯಕ್ಕಾಗಿ ಸಂಕಲ್ಪ ಇವೆಲ್ಲವುಗಳಿಂದ ತುಂಬಿಕೊಂಡಿರುತ್ತದೆ. ಅದು ಕರುಣೆ ತೋರಿಸುವುದಿಲ್ಲ, ಸಾಂತ್ವನ ನೀಡುತ್ತದೆ, ಅಜ್ಞಾನದ ಚಲನೆಯೊಂದಿಗೆ ತನ್ನನ್ನು ಗುರುತಿಸಿ–ಕೊಳ್ಳುವುದಿಲ್ಲ, ಅದಕ್ಕೆ ಚಿಕಿತ್ಸೆ ಒದಗಿಸುತ್ತದೆ, ಜ್ಞಾನೋದಯ ಉಂಟಾಗುವಂತೆ ಮಾಡುತ್ತದೆ.



ಸಾರದಲ್ಲಿರುವ ಪರಿಶುದ್ಧತೆಯಲ್ಲಿ ಕೇವಲ ಯಾವುದು ಪರಿಪೂರ್ಣವಾಗಿ ದೈವಿಕವಾಗಿರುವುದೋ ಅದು ಮಾತ್ರ ಆ ವೇದನೆಯನ್ನು ಭಾವನೆಗೆ ತಂದುಕೊಳ್ಳಬಹುದು ಎಂಬುದು ಸ್ಪಷ್ಟವಿದೆ, ಆದರೆ ವಿಶಾಲ ಹಾಗೂ ಉದಾರ ಹೃದಯವಿದ್ದ ಎಲ್ಲರಲ್ಲಿ ಅದು ಅಹಂಕಾರದ ಕಪ್ಪು ಮೋಡಗಳ ಹಿಂದೆ ಭಾಗಶಃ, ಕ್ಷಣಿಕವಾಗಿ ತೋರಿಬರುವ ಮಿಂಚಿನ ಹೊಳಪಿದ್ದ ಹಾಗೆ ಕಾಣಿಸಿಕೊಳ್ಳುತ್ತದೆ. ಹಾಗಿದ್ದಾಗ್ಯೂ, ಬಹಳಷ್ಟು ಸಲ, ವ್ಯಕ್ತಿಗತ ಪ್ರಜ್ಞೆಯಲ್ಲಿ ಅದು ಆ ನೀಚ, ಕ್ಷುದ್ರ ಸ್ವಾನುಕಂಪದೊಡನೆ ಮಿಶ್ರಣಕ್ಕೊಳಗಾಗಿರುತ್ತದೆ, ಅದೇ ನಿರಾಶೆಗೆ ಹಾಗೂ ದೌರ್ಬಲ್ಯಕ್ಕೆ ಕಾರಣವಾಗಿರುತ್ತದೆ. ಅದೇನೇ ಇದ್ದರೂ ಮನುಷ್ಯ ಸಾಕಷ್ಟು ಎಚ್ಚರದಿಂದಿದ್ದು ಈ ಮಿಶ್ರಣವನ್ನು ತಿರಸ್ಕರಿಸಲು ಇಲ್ಲವೆ ಅದನ್ನು ಕನಿಷ್ಠಮಟ್ಟಕ್ಕೆ ಇಳಿಸಲು ಸಾಧ್ಯವಾದರೆ ಅವನು ಈ ದೈವೀ ಕರುಣೆಗೆ ಘನತೆಯುಳ್ಳ ಸನಾತನ ಸಂತೋಷ ಆಧಾರ ಒದಗಿಸುತ್ತದೆ ಎಂಬುದನ್ನು ಕೂಡಲೆ ಕಂಡುಕೊಳ್ಳುತ್ತಾನೆ. ಜಗತ್ತನ್ನು ಅದರ ದುಃಖ ಮತ್ತು ಅಜ್ಞಾನದಿಂದ ಮುಕ್ತಗೊಳಿಸಲು ಆ ಆಧಾರಕ್ಕೆ ಮಾತ್ರ ಬಲ ಹಾಗೂ ಸಾಮರ್ಥ್ಯವಿರುತ್ತದೆ.

ಶತ್ರು ಹಾಗೂ ಅವನ ಕ್ರಿಯೆಯ ಎಲ್ಲ ಪರಿಣಾಮ ಸಂಪೂರ್ಣವಾಗಿ ಮಾಯವಾಗುವುದರಿಂದ ಈ ವೇದನೆಯೂ ಕೂಡ ವಿಶ್ವದಿಂದ ಮಾಯವಾಗುತ್ತದೆ.

**ಪ್ರಶ್ನೆ** : *ನಾನು ಅಭಿಮಾನವನ್ನು ತೊಡೆದು ಹಾಕುವುದು ಹೇಗೆ?*

**ಶ್ರೀಮಾತೆ** : ಅಯ್ಯೋ ದೇವರೆ, ಮೊದಲನೆಯದಾಗಿ ಅದು ಎಷ್ಟೊಂದು ಅನರ್ಥಕಾರಕ ಎಂಬುದನ್ನು ನೋಡಿರಿ. ಅದು ಬಹಳ ಕ್ಷುದ್ರವಾದದ್ದು ಹಾಗೂ ವಿನಾಶಕಾರಿ, ನಂತರ ಒಂದು ಹೆಜ್ಜೆ ಮುಂದೆ ಇರಿಸಿ ನಿಮ್ಮನ್ನೇ ನೀವು ಅಪಹಾಸ್ಯಕ್ಕೆ ಗುರಿಪಡಿಸಬೇಕು, ಎಷ್ಟರ ಮಟ್ಟಿಗೆ ಹಾಸ್ಯಾಸ್ಪದರಾಗಿರುತ್ತೀರಿ ಎಂಬುದನ್ನು ನೋಡಬೇಕು. ಈ ರೀತಿಯಾಗಿ ಅದನ್ನು (ಅಭಿಮಾನವನ್ನು) ತೊಡೆದು ಹಾಕುವಿರಿ. ಆದರೆ ಎಲ್ಲಿಯವರೆಗೆ ಅದನ್ನು ಗಂಭೀರವಾಗಿ ತೆಗೆದುಕೊಳ್ಳುವಿರೋ, ಅದರ ಚಲನೆಯನ್ನು ಸಮರ್ಥಿಸುವಿರೋ, ಮನಸ್ಸಿನಲ್ಲಿ ಎಲ್ಲಿಯೋ ಒಂದೆಡೆ "ಒಟ್ಟಿನಲ್ಲಿ ಅದು ಸ್ವಾಭಾವಿಕ, ನನ್ನನ್ನು ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳಲಾಗಿದೆ, ನಾನು ಅದರಿಂದ ವೇದನೆಗೆ ಒಳಗಾಗಿದ್ದೇನೆ" ಎಂಬ ವಿಚಾರವಿದ್ದರೆ ಆಗ ಅದು ಮುಗಿದುಹೋದಂತೆ, ಅದು ಎಂದಿಗೂ ಹೋಗುವುದಿಲ್ಲ. ಆದರೆ ಅದು ಸ್ವಾಭಾವಿಕವಾಗಿ ಬಹಳ ಗಣನೀಯವಾದ ಅಹಂಕಾರ, ಸಣ್ಣ ಮನಸ್ಸಿರುವಿಕೆ, ಎಲ್ಲದಕ್ಕಿಂತಲೂ ಹೆಚ್ಚಾಗಿ ಭಾವನೆಗಳ ಕ್ಷುದ್ರತೆ, ಚಿಕ್ಕ ಹೃದಯವಂತಿಕೆ

ಇವೆಲ್ಲವುಗಳಿಂದುಂಟಾದ ದೌರ್ಬಲ್ಯ ಮತ್ತು ಕೀಳರಿಮೆ ಇವುಗಳ ಕುರುಹು ಎಂಬುದನ್ನು ಅರಿತುಕೊಂಡರೆ ಅದರೊಡನೆ ನೀವು ಹೋರಾಡಬಹುದು. ಆದರೆ ನಿಮ್ಮ ಯೋಚನೆಯಲ್ಲಿ ಹೊಂದಿಕೆ ಇರಬೇಕು. "ನನಗೆ ನೋವನ್ನುಂಟು ಮಾಡಲಾಗಿದೆ, ನಾನು ವೇದನೆ ಪಡುತ್ತಿದ್ದೇನೆ, ನಾನು ವೇದನೆ ಪಡುತ್ತಿದ್ದೇನೆಂಬುದನ್ನು ತೋರಿಸಿಕೊಡುತ್ತೇನೆ" ಎಂಬ ಮನೋಭಾವವಿದ್ದರೆ, ಆಗ ಅದು ಆ ರೀತಿಯದಾಗಿರುತ್ತದೆ. ಹೆಚ್ಚಿನ ಮಟ್ಟಿಗೆ ರಹಸ್ಯವಾಗಿ ಸೇಡು ತೀರಿಸಿಕೊಳ್ಳುವ ಮನೋಭಾವವನ್ನು ಹೊಂದಿರುವ ಜನರನ್ನು ಕುರಿತು ಹೇಳಲು ನಾನು ಹೋಗುವುದಿಲ್ಲ, ಅವರು "ನಾನು ವೇದನೆ ಪಡುವಂತೆ ಮಾಡಿದ್ದಾರೆ, ಅವರು ವೇದನೆ ಪಡುವಂತೆ ನಾನು ಮಾಡುವೆ" ಎಂದು ಹೇಳುತ್ತಾರೆ. ಇದು ಅಸ್ತಿತ್ವದಲ್ಲಿ ಇರಬಾರದು ಎಂದು ಗಮನಕ್ಕೆ ತೆಗೆದುಕೊಳ್ಳುವವರಿಗೆ ಸಾಕಷ್ಟು ಕಿರಿಕಿರಿಯನ್ನುಂಟು ಮಾಡುತ್ತದೆ – ಆದಾಗ್ಯೂ ಅದನ್ನು ಸುಲಭವಾಗಿ ಯಾವಾಗಲೂ ಪ್ರತಿರೋಧಿಸಲಾಗುವುದಿಲ್ಲ. ಅದು ಬಹಳ ಸಂವೇದನಾಶೀಲ–ವಾಗಿರಬಹುದು, ಭಾವನಾತ್ಮಕವಾಗಿರಬಹುದು, ಅದಕ್ಕೆ ಸ್ವಲ್ಪ ಗಾಢತೆ ಇರಬಹುದು, ಆದರೆ ಅದು ಬಹಳ ಕ್ಷುದ್ರವಾದದ್ದು, ಎಲ್ಲವೂ ತಾನೇ ತನ್ನ ಮೇಲೆ ತಿರುಗಿಸಿ–ಕೊಂಡಂತಿರುತ್ತದೆ, ಮತ್ತು ಬಹಳ ತುಚ್ಛವಾದದ್ದು.

ನಿಮ್ಮಲ್ಲಿ ಕಾರ್ಯಕೌಶಲವುಳ್ಳ ತರ್ಕವಿದ್ದರೆ, ಸಹಜವಾಗಿ, ಅದನ್ನು ಉಪಯೋಗಿಸಬೇಕು. ತರ್ಕವನ್ನು ಉಪಯೋಗಿಸಿ ಅತ್ಯಂತ ಸತ್ಯವಾದದ್ದನ್ನು ನಿಮಗೇ ಹೇಳಬೇಕು: ನಮ್ಮ ಸತ್ತೆಯಲ್ಲಿ ವೇದನೆಗೊಳಗಾಗುತ್ತಿರುವುದು ಕೇವಲ ಅಹಂಕಾರ, ಅಹಂಕಾರವಿರದೇ ಹೋದರೆ ವೇದನೆ ಇರುವುದಿಲ್ಲ. ಮನುಷ್ಯನಿಗೆ ಆಧ್ಯಾತ್ಮಿಕ ಜೀವನ ಬೇಕಾಗಿದ್ದರೆ, ಅವನು ತನ್ನ ಅಹಂಕಾರದ ಮೇಲೆ ಜಯ ಸಾಧಿಸಬೇಕು. ಹಾಗಾಗಿ ಮೊದಲು ಕೈಕೊಳ್ಳಬೇಕಾದುದು ವೇದನೆಯನ್ನು ನೇರವಾಗಿ ನೋಡುವುದಾಗಿದೆ, ಅದು ಎಷ್ಟರಮಟ್ಟಿಗೆ ಕ್ಷುದ್ರ ಅಹಂಕಾರದ ಅಭಿವ್ಯಕ್ತಿಯಾಗಿದೆ ಎಂಬುದನ್ನು ಗ್ರಹಿಸುವುದಾಗಿದೆ. ನಂತರ ಆ ಸ್ಥಳ ಸ್ವಚ್ಛವಾಗುವಂತೆ ಗುಡಿಸಬೇಕು, ಅದನ್ನು ಸ್ವಚ್ಛಗೊಳಿಸಿ "ಈ ಹೊಲಸು ನನಗೆ ಬೇಕಾಗಿಲ್ಲ, ನನ್ನ ಅಂತರಂಗದ ಕೋಣೆಯನ್ನು ಸ್ವಚ್ಛಗೊಳಿಸುವವನಿದ್ದೇನೆ" ಎಂದು ಹೇಳಬೇಕು.

**– ಶ್ರೀಮಾತೆ**

*



ನಿಮಗೆ ನನ್ನ ಬೋಧನೆ ಹೀಗಿದೆ: ವೇದನೆಯನ್ನು ಪೋಷಿಸಿಕೊಂಡು ಬರುವುದು ಬೇಡ ಮತ್ತು ವೇದನೆ ಒಟ್ಟಿನಲ್ಲಿ ನಿಮ್ಮನ್ನು ತೊರೆದು ಹೋಗುವುದು, ಪ್ರಗತಿಗಾಗಿ ವೇದನೆ ಎಳ್ಳಷ್ಟೂ ಅತ್ಯಗತ್ಯದ್ದಾಗಿಲ್ಲ. ಏಕಪ್ರಕಾರದ ಮತ್ತು ಪ್ರಸನ್ನಚಿತ್ತವಿರುವ ಸಮತೆಯನ್ನು ಹೊಂದುವುದರ ಮೂಲಕ ಅತ್ಯಂತ ಶ್ರೇಷ್ಠ ಪ್ರಗತಿಯನ್ನು ಸಾಧಿಸಬಹುದು.

**(15/359, 6/404–05, 14/266)** **– ಶ್ರೀಮಾತೆ**

*

## ಭೌತಿಕ ವೇದನೆ – ಮೂರು ಹಂತಗಳಲ್ಲಿ ಅದು ಕಲಿಸಿಕೊಡುವ ಶಿಕ್ಷಣ

ಭೌತಿಕ ವೇದನೆಯೆ? ಒಂದು ವಿಷಯ ನಿಶ್ಚಿತ. ಅದು ಪದ್ಧತಿಯಲ್ಲಿ ಸ್ವಭಾವದಲ್ಲಿ ಇದ್ದಿತು ಎಂದು ನನಗನಿಸುತ್ತದೆ. ಅದನ್ನು ಒಂದು ಸೂಚಕವೆಂದು ಅನ್ವೇಷಿಸ–ಲಾಗಿತ್ತು, ಏಕೆಂದರೆ, ಉದಾಹರಣೆಗೆ ದೇಹ ಒಂದಿಲ್ಲೊಂದು ರೀತಿಯಲ್ಲಿ ಅಸ್ತವ್ಯಸ್ತತೆಗೊಳಗಾದಾಗ ಮತ್ತು ಆ ಅಸ್ತವ್ಯಸ್ತತೆ ಯಾವ ವೇದನೆಗೂ ಕಾರಣವಾಗದಿದ್ದರೆ ಮನುಷ್ಯ ಅಸ್ತವ್ಯಸ್ತತೆಯನ್ನು ತಡೆಯುವ ಮಾರ್ಗವನ್ನು ಹುಡುಕುತ್ತಿರಲಿಲ್ಲ. ರೋಗವನ್ನು ವಾಸಿಮಾಡುವುದನ್ನು ಕುರಿತು ಮನುಷ್ಯ ಯೋಚಿಸುತ್ತಾನೆ, ಏಕೆಂದರೆ ಅದು ಅವನಿಗೆ ವೇದನೆಯನ್ನುಂಟು ಮಾಡುತ್ತದೆ. ಅದು ನಿಮಗೆ ಯಾವ ತರಹದ ಅಸಂತೋಷವನ್ನು ಉಂಟು ಮಾಡದಿದ್ದರೆ ನೀವು ಅದಕ್ಕೆ ಚಿಕಿತ್ಸೆ ನೀಡುವುದನ್ನು ಕುರಿತು ಯೋಚಿಸುತ್ತಿರಲಿಲ್ಲ. ಹಾಗಾಗಿ ಪ್ರಕೃತಿಯ ಮಿತವ್ಯಯದಲ್ಲಿ ಭೌತಿಕ ವೇದನೆಯ ಮೊದಲ ಉದ್ದೇಶ ನಿಮಗೆ ಎಚ್ಚರಿಕೆ ಕೊಡುವುದಾಗಿತ್ತು.

ದುರ್ದೈವವಶಾತ್ ಈ ವಿಷಯದಲ್ಲಿ ತನ್ನ ಮೂಗನ್ನು ತೂರಿಸುವ ಪ್ರಾಣಿಕವಿದೆ, ಅದು ವೇದನೆಯನ್ನು ಹೆಚ್ಚಿಸುವ, ತಿರುಚುವ, ತೀಕ್ಷ್ಣವಾಗಿಸುವ ಕ್ರಿಯೆಗಳಲ್ಲಿ ವಿಕೃತ ಸಂತೋಷವನ್ನು ಕಂಡುಕೊಳ್ಳುತ್ತದೆ, ಇದು ಇಡೀ ವ್ಯವಸ್ಥೆಯನ್ನು ವಿರೂಪಗೊಳಿಸುತ್ತದೆ. ಏಕೆಂದರೆ ವೇದನೆ ಸೂಚಕವಾಗುವುದರ ಬದಲಾಗಿ, ಕೆಲವೊಮ್ಮೆ ರೋಗವನ್ನು ಸಂತೋಷಕರ ವಿಷಯವನ್ನಾಗಿ ಮಾಡುವ, ಮನುಷ್ಯ ತನ್ನನ್ನು ಸ್ವಾರಸ್ಯಕರವಾಗಿರುವಂತೆ ಮಾಡುವ ಹಾಗೂ ತನ್ನ ಮೇಲೆ ತಾನೇ ಕರುಣೆ ತೋರಿಸುವ ಸಂದರ್ಭವನ್ನಾಗಿ ಮಾಡುತ್ತದೆ. – ಪ್ರಾಣಿಕದಿಂದ ಇಂತಹ ಎಲ್ಲ ಬಗೆಯ ವಿಷಯಗಳು ಬರುತ್ತವೆ, ಅವುಗಳಲ್ಲಿ ಒಂದು ಇನ್ನೊಂದಕ್ಕಿಂತ ಹೆಚ್ಚು ಅಸಹ್ಯಕರವಾಗಿರುತ್ತವೆ. "ಕಾಳಜಿ ತೆಗೆದುಕೊಳ್ಳಿರಿ" ಅದೊಂದು ಅಪಾಯದ

ಸಂಕೇತ ಇದ್ದ ಹಾಗೆ. "ಕಾಳಜಿ ತೆಗೆದುಕೊಳ್ಳಿರಿ ಅಲ್ಲಿ ಕ್ರಮ ತಪ್ಪಿದ ಏನೋ ಒಂದಿದೆ."

*

"ನೋವು ನಮ್ಮ ಶ್ರೀಮಾತೆಯ ಸ್ಪರ್ಶವಾಗಿದ್ದು ಅದನ್ನು ನಾವು ಹೇಗೆ ಸಹಿಸಬೇಕು ಮತ್ತು ಆನಂದ ಪರವಶತೆಯಲ್ಲಿ ಹೇಗೆ ಬೆಳೆಯಬೇಕು ಎಂಬುದನ್ನು ನಮಗೆ ಕಲಿಸಿಕೊಡುತ್ತದೆ. ಅವಳು ಶಿಕ್ಷಣ ಕೊಡುವ ಮೂರು ಹಂತಗಳಿವೆ: ತಾಳಿಕೊಳ್ಳುವುದನ್ನು ಕಲಿಯುವುದು ಮೊದಲ ಹಂತ, ನಂತರ ಆತ್ಮದ ಸಮತೆಯನ್ನು ಸಾಧಿಸುವುದು, ಕೊನೆಯದು ಆನಂದ ಪರವಶತೆಯನ್ನು ಕಂಡುಕೊಳ್ಳುವುದಾಗಿದೆ."

**– ಶ್ರೀ ಅರವಿಂದರು : ಯೋಚನೆಗಳು ಹಾಗೂ ಸೂಕ್ತಿಗಳು.**

*

ನೈತಿಕ ವಿಷಯಗಳನ್ನು ಕುರಿತು ಹೇಳುವುದಾದರೆ ಇದು ಸಂಪೂರ್ಣವಾಗಿ ಸ್ಪಷ್ಟವಿದೆ, ಅದು ವಿವಾದಕ್ಕೆಡೆಗೊಡದ ವಿಷಯ–ಎಲ್ಲ ನೈತಿಕ ವೇದನೆ ನಿಮ್ಮ ಚಾರಿತ್ರ್ಯಕ್ಕೆ ಎರಕ ಕೊಡುತ್ತದೆ ಮತ್ತು ಅದನ್ನು ಹೇಗೆ ಸ್ವೀಕರಿಸಬೇಕು ಎಂಬುದು ತಿಳಿದಿದ್ದರೆ ನೇರವಾಗಿ ಆನಂದ ಪರವಶತೆಯತ್ತ ಕರೆದೊಯ್ಯುತ್ತದೆ. ಆದರೆ ವೇದನೆ ದೇಹಕ್ಕೆ ಬಂದಾಗ . . .

ನೋವನ್ನು ಹೇಗೆ ಸಹಿಸಿಕೊಳ್ಳಬೇಕೆಂಬುದನ್ನು ದೇಹಕ್ಕೆ ಕಲಿಸಿಕೊಟ್ಟಾಗ ಅದು ಹೆಚ್ಚು ಹೆಚ್ಚಾಗಿ ಚೇತರಿಸಿಕೊಳ್ಳುವಂತಾಗುತ್ತದೆ ಮತ್ತು ಬಹಳ ಕಡಿಮೆ ರೀತಿಯಲ್ಲಿ ಅಡ್ಡಿಪಡಿಸುತ್ತದೆ ಎಂದು ವೈದ್ಯರು ಹೇಳುವುದು ಸತ್ಯವಾಗಿದೆ–ಇದು ಮೂರ್ತರೂಪದ ಪರಿಣಾಮ, ತಮ್ಮ ದೇಹದಲ್ಲಿ ಎಲ್ಲಿಯೋ ಒಂದೆಡೆ ನೋವುಂಟಾದಾಗ ಕೂಡಲೆ ಸಂಪೂರ್ಣವಾಗಿ ಅಸ್ತವ್ಯಸ್ತತೆಗೊಳಗಾಗುವುದನ್ನು ಹೇಗೆ ತಪ್ಪಿಸಿಕೊಳ್ಳಬೇಕು ಎಂಬುದನ್ನು ತಿಳಿದುಕೊಂಡ, ಅದನ್ನು ಶಾಂತ ರೀತಿಯಿಂದ ಸಹಿಸಿಕೊಳ್ಳಬಲ್ಲ, ತಮ್ಮ ಸಮತೋಲನವನ್ನು ಕಾಯ್ದುಕೊಳ್ಳಬಲ್ಲ ಜನರ ಸಂದರ್ಭದಲ್ಲಿ ದೇಹ ಸಿಡಿದು ಹೋಗದಂತೆ ಅಸ್ತವ್ಯಸ್ತತೆಯನ್ನು ಸಹಿಸಿಕೊಳ್ಳುವ ಕ್ಷಮತೆ ಹೆಚ್ಚಾಗುತ್ತದೆ ಎಂದು ತೋರಿಬರುತ್ತದೆ. ಇದೊಂದು ದೊಡ್ಡ ಸಿದ್ಧಿಯನ್ನು ಸಾಧಿಸಿದಂತೆ. ಕೇವಲ ವ್ಯಾವಹಾರಿಕ ಬಾಹ್ಯ ದೃಷ್ಟಿಕೋನದಿಂದ ಈ ಪ್ರಶ್ನೆಯನ್ನು ನನಗೆ ನಾನೇ ಕೇಳಿದ್ದೇನೆ ಮತ್ತು ಅದು ಹಾಗಿರುವಂತೆ ತೋರಿಬರುತ್ತದೆ: ಆಂತರಿಕವಾಗಿ ಇದನ್ನು ನನಗೆ ಹಲವಾರು ಸಲ ಹೇಳಲಾಗಿದೆ–



ಚಿಕ್ಕ ಅನುಭವಗಳ ಮೂಲಕ ಹೇಳಲಾಗಿದ್ದು ಹಾಗೂ ತೋರಿಸಿಕೊಟ್ಟದ್ದು ಏನೆಂದರೆ ನೋವಿಗೆ ಭಯ ಮತ್ತು ಕಾತರ ಕೂಡಿಸದಿದ್ದರೆ, ನಾವು ಯೋಚಿಸುವು–ದಕ್ಕಿಂತ ಬಹಳ ಹೆಚ್ಚಿನ ರೀತಿಯಲ್ಲಿ ದೇಹ ತಾಳಿಕೊಳ್ಳಬಲ್ಲದೆಂಬುದು. ಮಾನಸಿಕ ಪ್ರಭಾವವನ್ನು ತೆಗೆದುಹಾಕಿಬಿಟ್ಟರೆ, ದೇಹವನ್ನು ಅದರಷ್ಟಕ್ಕೆ ಬಿಟ್ಟುಕೊಟ್ಟರೆ ಮುಂದೇನು ಸಂಭವಿಸಲಿದೆ ಎಂಬುದನ್ನು ಕುರಿತು ಅದಕ್ಕೆ ಭಯ, ಅಪಾಯದ ನಿರೀಕ್ಷೆ ಇಲ್ಲವೆ ಕಾತರ ಇರುವುದಿಲ್ಲ–ತಳಮಳವಿರುವುದಿಲ್ಲ–ಅದು ಬಹಳಷ್ಟನ್ನು ತಾಳಿಕೊಳ್ಳಬಲ್ಲದು.

ನೋವನ್ನು ತಾಳಿಕೊಳ್ಳುವೆನೆಂದು ದೇಹ ನಿರ್ಧರಿಸಿದಾಗ ಎರಡನೆಯ ಹೆಜ್ಜೆ ಬರುತ್ತದೆ – ಅದು ತಾಳಿಕೊಳ್ಳುವ ನಿರ್ಧಾರ ಮಾಡುತ್ತದೆ; ಕೂಡಲೆ ನೋವಿನಲ್ಲಿ ತೀಕ್ಷ್ಣವಾದದ್ದು ಮಾಯವಾಗುತ್ತದೆ. ನಾನಿದನ್ನು ಸಂಪೂರ್ಣವಾಗಿ ಪ್ರಾಪಂಚಿಕ ರೀತಿಯಲ್ಲಿ ಹೇಳುತ್ತಿದ್ದೇನೆ.

ಮತ್ತು ನೀವು ಸ್ಥಿರತೆಯಲ್ಲಿದ್ದರೆ–ಇಲ್ಲಿ ಸ್ಥಿರತೆಯ ಆವಶ್ಯಕತೆ ಕುರಿತು ಇನ್ನೊಂದು ವಿಷಯ ಬರುತ್ತದೆ–ನಿಮ್ಮಲ್ಲಿ ಆಂತರಿಕ ಸ್ಥಿರತೆಯಿದ್ದರೆ, ಆಗ ನೋವು ಬಹುಮಟ್ಟಿಗೆ ಸಂತೋಷಕರ ಸಂವೇದನೆಯಾಗಿ ಬದಲಾಗುತ್ತದೆ–ಸಾಮಾನ್ಯ ಅರ್ಥದಲ್ಲಿ ಸಂತೋಷ ಎಂದಲ್ಲ, ಆದರೆ ಬಹುಮಟ್ಟಿಗೆ ನೆಮ್ಮದಿಯಿಂದಿರುವ ಭಾವನೆ ಬರುತ್ತದೆ. ಮತ್ತು ನಾನಿದನ್ನು ಕೇವಲ ಭೌತಿಕ ರೀತಿಯಲ್ಲಿ, ಪ್ರಾಪಂಚಿಕ ರೀತಿಯಲ್ಲಿ ಹೇಳುತ್ತಿದ್ದೇನೆ.

ಕೊನೆಯ ಹಂತ: ದೈವೀ ಸಾನ್ನಿಧ್ಯದಲ್ಲಿ, ಸಾರ್ವಭೌಮ ದೈವೀ ಸಂಕಲ್ಪದಲ್ಲಿ ಜೀವಕೋಶಗಳಿಗೆ ನಂಬಿಕೆಯಿದ್ದಾಗ, ಎಲ್ಲವೂ ಒಳ್ಳೆಯದಕ್ಕಾಗಿದೆ ಎಂದು ಅವುಗಳಲ್ಲಿ ವಿಶ್ವಾಸವಿದ್ದಾಗ ಅತ್ಯಾನಂದ ಬರುತ್ತದೆ–ಜೀವಕೋಶಗಳು ಹೀಗೆ ತೆರೆದುಕೊಳ್ಳುತ್ತವೆ, ಪ್ರಕಾಶಮಯವಾಗುತ್ತವೆ, ಅತ್ಯುತ್ಸಾಹದಿಂದ ಇರುತ್ತವೆ.

ಹೀಗೆ ನಾಲ್ಕು ಹಂತಗಳಿವೆ–ಇಲ್ಲಿ ಮೂರು ಹಂತಗಳ ಬಗ್ಗೆ ವಿಶೇಷವಾಗಿ ಹೇಳಲಾಗಿದೆ.

ಬಹುಶಃ ನಾಲ್ಕನೆಯದು ಎಲ್ಲರ ಅಳವಿನಲ್ಲಿಲ್ಲ–ಆದರೆ ಮೊದಲಿನ ಮೂರು ಹಂತಗಳು ಬಹಳ ಸ್ಪಷ್ಟವಾಗಿವೆ–ಅವು ಹಾಗಿವೆಯೆಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆ.

**(6/406, 10/170–71)** **– ಶ್ರೀಮಾತೆ**

*

## ವೇದನೆಗೊಳಗಾದ ಹೃದಯಗಳಲ್ಲಿ ಭರವಸೆ ಪುನರುಜ್ವಲಗೊಳ್ಳುವಂತೆ ಮಾಡಲು ಕೆಲವು ಪುಟಗಳು

ನಾನು ಈ ವಿಷಯವನ್ನು ಮುಕ್ತಾಯಗೊಳಿಸುವುದಕ್ಕಿಂತ ಮೊದಲು ಈಗಾಗಲೆ ತೋರಿಕೆಗೆ ವಿಫಲವಾದವುಗಳು ಎನ್ನುವ ಪ್ರಯತ್ನಗಳನ್ನು ಕೈಕೊಂಡವರಿಗಾಗಿ, ಮಾರ್ಗದಲ್ಲಿ ಗುಂಡಿಹಳ್ಳಗಳನ್ನು ಎದುರಿಸಿ ತಮ್ಮ ದೌರ್ಬಲ್ಯದ ಪ್ರಮಾಣವನ್ನು ಕಂಡುಕೊಂಡವರಿಗಾಗಿ, ಆತ್ಮವಿಶ್ವಾಸ ಹಾಗೂ ಧೈರ್ಯಗಳನ್ನು ಕಳೆದುಕೊಳ್ಳುವ ಅಪಾಯದಲ್ಲಿರುವವರಿಗಾಗಿ ಕೆಲವು ಪುಟಗಳನ್ನು ಇಲ್ಲಿ ಅಧಿಕವಾಗಿ ಸೇರಿಸು–ತ್ತಿದ್ದೇನೆ. ವೇದನೆಗೊಳಗಾದವರ ಹೃದಯಗಳಲ್ಲಿ ಭರವಸೆಯನ್ನು ಪುನರುಜ್ವಲ–ಗೊಳ್ಳುವಂತೆ ಮಾಡುವುದಕ್ಕಾಗಿ ಆಧ್ಯಾತ್ಮಿಕ ಕಾರ್ಯಕರ್ತನೊಬ್ಬ ತನ್ನನ್ನು ಎಲ್ಲ ಬಗೆಯ ಸತ್ವಪರೀಕ್ಷೆಗಳು ಪರಿಶುದ್ಧಗೊಳಿಸುವ ಜ್ವಾಲೆಗಳ ಹಾಗೆ ತಳ್ಳಿಕೊಂಡು ಹೋಗುತ್ತಿದ್ದಾಗ ಈ ಪುಟಗಳನ್ನು ಬರೆದಿದ್ದನು.

ದಣಿದುಕೊಂಡ, ಮನಗುಂದಿದ ಮತ್ತು ಗಾಯಗೊಂಡ, ಪತನಗೊಳ್ಳುವ ನೀವು, ಬಹುಶಃ ಸೋತು ಹೋಗಿದ್ದೇವೆ ಎಂದು ಯೋಚಿಸುವ ನೀವು ಮಿತ್ರನೊಬ್ಬನ ದನಿಗೆ ಕಿವಿಗೊಡಿರಿ. ಅವನಿಗೆ ನಿಮ್ಮ ವೇದನೆಗಳ ಬಗ್ಗೆ ಅರಿವಿದೆ, ಅವನು ಅವುಗಳಲ್ಲಿ ಪಾಲುಗೊಂಡಿದ್ದಾನೆ, ನಿಮ್ಮ ಹಾಗೆ ಪೃಥ್ವಿಯ ಮೇಲಿನ ದುಷ್ಟವಾದುದರಿಂದ ವೇದನೆಗೊಳಗಾಗಿದ್ದಾನೆ, ನಿಮ್ಮ ಹಾಗೆ ದೈನಂದಿನ ಭಾರದಡಿ ಹಲವಾರು ಮರುಭೂಮಿಗಳನ್ನು ದಾಟಿ ಬಂದಿದ್ದಾನೆ, ಹಸಿವು ನೀರಡಿಕೆಗಳನ್ನು, ಏಕಾಂಗಿತನ, ಪರಿತ್ಯಾಗಗಳನ್ನು ತಾಳಿಕೊಂಡ ಅನುಭವ ಅವನಿಗಿದೆ ಮತ್ತು ಕೊರತೆಗಳೆಲ್ಲವುಗಳಲ್ಲಿ ಅತ್ಯಂತ ಕ್ರೂರವಾದ ಹೃದಯದ ನಿರ್ಗತಿಕ ಸ್ಥಿತಿಯ ಅನುಭವವೂ ಅವನಿಗಿದೆ. ಅಯ್ಯೋ, ಸಂಶಯದ ಗಳಿಗೆಗಳನ್ನು, ದೋಷಗಳನ್ನು, ತಪ್ಪುಗಳನ್ನು, ವಿಫಲತೆಗಳನ್ನು, ಪ್ರತಿಯೊಂದು ದೌರ್ಬಲ್ಯವನ್ನು ಕೂಡ ಅವನು ಅರಿತಿದ್ದಾನೆ.

ಆದರೆ ಅವನು ಹೇಳುತ್ತಾನೆ: ಧೈರ್ಯದಿಂದಿರಿ! ಪ್ರತಿದಿನ ಬೆಳಿಗ್ಗೆ ತನ್ನ ಮೊದಲ ಕಿರಣಗಳಿಂದ ಬೆಳಕನ್ನು ತಂದುಕೊಟ್ಟು ನಮಗೆ ಸೂರ್ಯ ಕಲಿಸಿಕೊಡುವ ಪಾಠವನ್ನು ಕೇಳಿಸಿಕೊಳ್ಳಿರಿ. ಅದು ಭರವಸೆ ನೀಡುವ ಪಾಠ, ಸಾಂತ್ವನದ ಸಂದೇಶ.

ರೋದಿಸುತ್ತಿರುವ, ವೇದನೆಗೊಳಗಾಗಿರುವ, ನಡುಗುತ್ತಿರುವ ನೀವು, ನಿಮ್ಮ ಅನಿಷ್ಟಗಳಿಗೆ ಕೊನೆಯನ್ನು, ನಿಮ್ಮ ಶೂಲೆಗಳಿಗೆ ಹೊರಹರಿವನ್ನು ಕಂಡುಕೊಳ್ಳಲು



ಧೈರ್ಯ ತಂದುಕೊಳ್ಳಲಾರದ ನೀವು ಇಲ್ಲಿ ನೋಡಿರಿ: ಅರುಣೋದಯ ಕಾಣದ ರಾತ್ರಿಯಿಲ್ಲ ಮತ್ತು ಅರುಣೋದಯಕ್ಕಿಂತ ಮುಂಚೆ ರಾತ್ರಿ ಗಾಢವಾಗಿರುತ್ತದೆ, ಸೂರ್ಯನು ಕರಗಿಸದ ಮಂಜಿಲ್ಲ, ಹೊಂಬಣ್ಣ ನೀಡದ ಮೋಡವಿರುವುದಿಲ್ಲ, ಇಂಗಿಹೋಗದ ಕಣ್ಣೀರಿರುವುದಿಲ್ಲ, ಪ್ರಕಾಶಿಸುವ ವಿಜಯಶಾಲಿ ಕಾಮನಬಿಲ್ಲು ಅನುಸರಿಸಿ ಬರದ ಬಿರುಗಾಳಿಯಿರುವುದಿಲ್ಲ, ಅವನು ಕರಗಿಸದ ಹಿಮವಿರುವುದಿಲ್ಲ, ಪ್ರಭಾಮಯವಾದ ವಸಂತ ಋತುವನ್ನಾಗಿ ಬದಲಿಸದ ಚಳಿಗಾಲವಿರುವುದಿಲ್ಲ.

ನಿಮಗೂ ಕೂಡ ತನ್ನ ಪ್ರಮಾಣಕ್ಕನುಸಾರವಾಗಿ ವೈಭವವನ್ನು ತಂದುಕೊಡದ ಕಡುಸಂಕಟವಿರುವುದಿಲ್ಲ, ಸಂತೋಷವನ್ನಾಗಿ ಪರಿವರ್ತಿಸಲಾಗದ ತೀವ್ರಯಾತನೆ ಇರುವುದಿಲ್ಲ, ವಿಜಯವನ್ನಾಗಿ ಪರಿವರ್ತಿಸದ ಸೋಲಿರುವುದಿಲ್ಲ, ಉಚ್ಚತರ ಆರೋಹಣವನ್ನಾಗಿಸದ ಪತನವಿರುವುದಿಲ್ಲ, ಜೀವನದ ಪ್ರಕಾಶಮಯ ಕೇಂದ್ರವನ್ನಾಗಿಸದ ಏಕಾಂಗಿತನವಿರುವುದಿಲ್ಲ, ಸಾಮರಸ್ಯದ್ದನ್ನಾಗಿ ಮಾಡಲಾಗದ ವಿವಾದವಿರುವುದಿಲ್ಲ–ಕೆಲವೊಮ್ಮೆ ಎರಡು ಮನಸ್ಸುಗಳ ನಡುವಿನ ತಪ್ಪು ತಿಳಿವಳಿಕೆ ಅವುಗಳೆರಡೂ ಹೃದಯಗಳು ಪರಸ್ಪರ ಸಂಸರ್ಗಕ್ಕಾಗಿ ತೆರೆದುಕೊಳ್ಳುವಂತೆ ಮಾಡುವುದು, ಸರ್ವಶಕ್ತವಾದದ್ದು ತನ್ನನ್ನು ತೆರೆದು ತೋರಿಸಲು ಪರಮೋಚ್ಚ ದೌರ್ಬಲ್ಯವನ್ನು ಆಯ್ದುಕೊಳ್ಳುವುದುಂಟು.

ನನ್ನ ಚಿಕ್ಕ ಮಗುವೆ ಕೇಳು, ಇಂದು ಇಷ್ಟೊಂದು ಬಲಗುಂದಿದ, ಬಹುಶಃ ಬಹಳ ಪತನಗೊಂಡಿರುವ, ಏನನ್ನೂ ಉಳಿಸಿಕೊಂಡಿರದ ಭಾವನೆ ತಂದುಕೊಳ್ಳುತ್ತಿರುವ ನೀನು, ನಿನ್ನ ದುಃಖವನ್ನು ಮುಚ್ಚಿಹಾಕಲು ಏನೂ ಇಲ್ಲ, ನಿನ್ನ ಅಭಿಮಾನವನ್ನು ಪೋಷಿಸಲು ಏನೂ ಇಲ್ಲ ಎಂದುಕೊಳ್ಳುತ್ತಿರುವ ನೀನು ಹಿಂದೆಂದಿಗೂ ಇಷ್ಟು ಶ್ರೇಷ್ಠನಾಗಿರಲಿಲ್ಲ. ಆಳಗಳಲ್ಲಿ ಎಚ್ಚತ್ತುಕೊಳ್ಳುವವನು ಶಿಖರಗಳಿಗೆ ಹೆಚ್ಚಿನ ರೀತಿಯಲ್ಲಿ ಹತ್ತಿರವಾಗಿರುತ್ತಾನೆ, ಏಕೆಂದರೆ ಕಂದರ ಆಳವಾದಷ್ಟು ಉನ್ನತ ಶಿಖರಗಳು ತಮ್ಮನ್ನು ತೆರೆದುತೋರಿಸುತ್ತವೆ!

ವಿಸ್ತಾರಗಳ ಅತ್ಯಂತ ಘನತೆಯುಳ್ಳ ಶಕ್ತಿಗಳು ತಮ್ಮನ್ನು ಭೌತದ್ರವ್ಯದ ಅತ್ಯಂತ ಅಪಾರದರ್ಶಕ ಪರದೆಗಳ ಹಿಂದೆ ತಮ್ಮನ್ನು ಅಲಂಕರಿಸಿಕೊಂಡಿರುತ್ತವೆ ಎಂಬುದು ನಿಮಗೆ ತಿಳಿದಿದೆಯೆ? ಓಹ್, ಅತ್ಯಂತ ಮಬ್ಬಾದ ನಮ್ರತೆಗಳೊಂದಿಗೆ ಸಾರ್ವಭೌಮ ಪ್ರೇಮದ ವಿವಾಹಗಳು, ಅತ್ಯಂತ ರಾಜಠೀವಿಯ ಪ್ರಕಾಶದೊಂದಿಗೆ ಛಾಯೆಯ ಹಾತೊರೆತದೊಂದಿಗೆ ವಿವಾಹ!

ಸತ್ವ ಪರೀಕ್ಷೆ ಇಲ್ಲವೆ ದೋಷವೊಂದು ನಿಮ್ಮನ್ನು ಕೆಡವಿ ಹಾಕಿದ್ದರೆ, ನೀವು ವೇದನೆಯ ಪಾತಾಳದ ಆಳಗಳಲ್ಲಿ ಮುಳುಗಿ ಹೋಗಿದ್ದರೆ ದುಃಖಪಡಬೇಡಿರಿ – ಏಕೆಂದರೆ ಅಲ್ಲಿ ನಿಜವಾದ ದೈವೀ ಪ್ರೇಮವಿದೆ, ಪರಮೋಚ್ಚ ಆಶೀರ್ವಾದ ಇದೆ, ಅವು ನಿಜವಾಗಿ ನಿಮ್ಮನ್ನು ತಲುಪಬಹುದು! ಏಕೆಂದರೆ ನಿಮ್ಮನ್ನು ಪರಿಶುದ್ಧಗೊಳಿಸುವ ಮೂಸೆಯೊಳಗಿಂದ ನೀವು ಹಾಯ್ದು ಹೋಗಿರುತ್ತೀರಿ, ವೈಭವೋಪೇತ ಆರೋಹಣಗಳು ನಿಮ್ಮವಾಗಿರುತ್ತವೆ.

ನೀವು ಕಾಡುಮೇಡು ನಿರ್ಜನ ಪ್ರದೇಶದಲ್ಲಿರುತ್ತೀರಿ, ಆಗ ನಿಶ್ಚಲನೀರವತೆಯ ದನಿಗಳಿಗೆ ಕಿವಿಗೊಡಿರಿ. ಹೊಗಳುವ ಶಬ್ದಗಳು ಮತ್ತು ಬಾಹ್ಯ, ಗಟ್ಟಿಯಾಗಿ ಘೋಷಿಸಿದ ಅನುಮೋದನೆ ನಿಮ್ಮ ಕಿವಿಗಳಿಗೆ ಸಂತೋಷ ನೀಡುತ್ತವೆ, ಆದರೆ ನಿಶ್ಚಲನೀರವತೆಯ ದನಿಗಳು ನಿಮ್ಮ ಆತ್ಮಕ್ಕೆ ಸಂತೋಷ ನೀಡುತ್ತವೆ ಮತ್ತು ನಿಮ್ಮ ಆಳಗಳ ಪ್ರತಿಧ್ವನಿ ಮತ್ತು ದೈವೀ ಸಾಮರಸ್ಯಗಳ ಸ್ತೋತ್ರ ಎಚ್ಚರಗೊಳ್ಳುವಂತೆ ಮಾಡುತ್ತವೆ.

ರಾತ್ರಿಯ ಆಳಗಳಲ್ಲಿ ನೀವು ನಡೆಯುತ್ತಿದ್ದೀರಿ, ಆಗ ರಾತ್ರಿಯ ಬಹುಮೌಲ್ಯ ನಿಧಿಗಳನ್ನು ಸಂಗ್ರಹಿಸಿರಿ. ಪ್ರಖರ ಸೂರ್ಯಪ್ರಕಾಶದಲ್ಲಿ ಬುದ್ಧಿಮತ್ತೆಯ ರೀತಿಗಳು ಪ್ರಕಾಶಿತಗೊಂಡಿರುತ್ತವೆ, ಆದರೆ ರಾತ್ರಿಯ ಶ್ವೇತ ಪ್ರಭೆಯಲ್ಲಿ, ಆಧ್ಯಾತ್ಮಿಕ ಸಂಪತ್ತಿನ ರಹಸ್ಯವಾದ ಪರಿಪೂರ್ಣತೆಯ ಮಾರ್ಗಗಳು ಬಚ್ಚಿಟ್ಟುಕೊಂಡಿರುತ್ತವೆ.

ನಿಮ್ಮಿಂದ ಪ್ರತಿಯೊಂದನ್ನು ಕಿತ್ತುಕೊಳ್ಳಲಾಗುತ್ತದೆ, ಅದು ಪೂರ್ಣತೆಯತ್ತ ಮಾರ್ಗ, ನಿಮ್ಮಲ್ಲಿ ಏನೂ ಉಳಿಯದೆ ಇದ್ದಾಗ ಪ್ರತಿಯೊಂದನ್ನೂ ನಿಮಗೆ ಕೊಡಲಾಗುತ್ತದೆ, ಏಕೆಂದರೆ ನಿಷ್ಕಪಟರಾದವರು, ಸತ್ಯವಂತರು ಆದವರಿಗೆ ಅತ್ಯಂತ ಕೆಟ್ಟದಾದುದರಿಂದ ಅತ್ಯಂತ ಒಳ್ಳೆಯದು ಯಾವಾಗಲೂ ಬರುತ್ತದೆ.

ಭೂಮಿಯಲ್ಲಿ ಬಿತ್ತಿದ ಪ್ರತಿಯೊಂದು ಕಾಳು ಸಾವಿರಾರು ಕಾಳುಗಳನ್ನು ಉತ್ಪಾದಿಸುತ್ತದೆ. ವೇದನೆಯ ಪ್ರತಿಯೊಂದು ಗರಿ–ಬಡಿತ ವೈಭವದತ್ತ ಹಾರಿ ಹೋಗುವಿಕೆಯಾಗಬಹುದು.

ಮತ್ತು ಶತ್ರು ಮನುಷ್ಯನನ್ನು ನಿರ್ದಯೆಯಿಂದ ಬೆಂಬತ್ತಿದಾಗ ನಾಶಮಾಡಲು ಅವನು ಕೈಕೊಳ್ಳುವ ಪ್ರತಿಯೊಂದು ಮನುಷ್ಯ ಕೇವಲ ಶ್ರೇಷ್ಠನಾಗುವಂತೆ ಮಾಡುತ್ತದೆ.



ಜಗತ್ತುಗಳ ಕತೆಯನ್ನು ಕೇಳಿರಿ, ಇಲ್ಲಿ ನೋಡಿರಿ: ಶ್ರೇಷ್ಠ ಶತ್ರು ವಿಜಯಿಯಾಗುವಂತೆ ತೋರಿಬರುತ್ತದೆ, ಅವನು ರಾತ್ರಿಯಲ್ಲಿ ಪ್ರಕಾಶವಿರುವ ಸತ್ತೆಗಳನ್ನು ಎಸೆಯುತ್ತಾನೆ, ರಾತ್ರಿ ತಾರೆಗಳಿಂದ ತುಂಬಿಕೊಳ್ಳುತ್ತದೆ. ಅವನು ವಿಶ್ವವ್ಯಾಪಿ ಕಾರ್ಯಗತಿಯತ್ತ ಕ್ರೋಧೋದ್ರಿಕ್ತನಾಗಿರುತ್ತಾನೆ, ಪೃಥ್ವಿಯ ಸಾಮ್ರಾಜ್ಯದ ನಿಯತ್ತಿನ ಮೇಲೆ ದಾಳಿ ಮಾಡುತ್ತಾನೆ, ಅದರ ಸಾಮರಸ್ಯವನ್ನು ಚೂರು ಚೂರು ಮಾಡುತ್ತಾನೆ, ಅದನ್ನು ವಿಭಜಿಸುತ್ತಾನೆ, ಪುನರ್ವಿಭಜಿಸುತ್ತಾನೆ, ಅದರ ಧೂಳಿಯನ್ನು ಅನಂತತೆಯ ನಾಲ್ಕು ಗಾಳಿಗಳಲ್ಲಿ ಹರಡುತ್ತಾನೆ. ಇಲ್ಲಿ ನೋಡಿರಿ! ಧೂಳು ಬಂಗಾರದ ಬೀಜವಾಗಿ ಬದಲಾಗಿದೆ, ಅನಂತವನ್ನು ಫಲವತ್ತಾಗಿಸುತ್ತದೆ ಮತ್ತು ಅದು ಲೋಕಗಳಿಂದ ಜನಜನಿತವಾಗುವಂತೆ ಮಾಡುತ್ತದೆ, ಆ ಲೋಕಗಳು ಅವುಗಳ ಸನಾತನ ಕೇಂದ್ರದ ಸುತ್ತ ಆಕರ್ಷಿತವಾಗಿ ಸ್ಥಳಾವಕಾಶದಲ್ಲಿ ವಿಶಾಲ ಕಕ್ಷೆಯಲ್ಲಿ ಸುತ್ತುತ್ತವೆ, ಅದರಿಂದಾಗಿ ವಿಭಜನೆ ಕೂಡ ಸಂಪದ್ಭರಿತ ಹಾಗೂ ಆಳವಾದ ಏಕತೆಯನ್ನು ಸೃಷ್ಟಿಸುತ್ತದೆ ಮತ್ತು ಭೌತಿಕ ವಿಶ್ವದ ಮೇಲ್ಮೈಗಳನ್ನು ಬಹುವಾಗಿಸುತ್ತ, ತಾನು ನಾಶ ಮಾಡಲು ಬಯಸಿದ ಸಾಮ್ರಾಜ್ಯವನ್ನು ವಿಸ್ತರಿಸುತ್ತದೆ.

ಅಗಾಧತೆಯ ಎದೆಯ ತೊಟ್ಟಿಲಲ್ಲಿ ತೂಗುವಾಗ ಆದಿಕಾಲದ ಗೋಲದ ಹಾಡು ಸುಂದರವಾಗಿತ್ತು, ಆದರೆ ಅದಕ್ಕೂ ಅದೆಷ್ಟು ಹೆಚ್ಚಿನ ಸೌಂದರ್ಯವುಳ್ಳದ್ದು ನಕ್ಷತ್ರ ಪುಂಜಗಳ ವಿಜಯಿಯಾದ ಸ್ವರ ಮೇಳ, ಅದು ಗೋಲಗಳ ಸಂಗೀತ, ವಿಜಯದ ಸನಾತನ ಸ್ತೋತ್ರದಿಂದ ತುಂಬಿಬಿಡುವ ಅಗಾಧ ಗಾಯಕವೃಂದ!

ಮತ್ತೆ ಕೇಳಿರಿ: ಪೃಥ್ವಿಯ ಮೇಲೆ ಮನುಷ್ಯ ತನ್ನ ದೈವೀ ಮೂಲದಿಂದ ಬೇರ್ಪಟ್ಟಾಗ ಆದ ಅವನ ಸ್ಥಿತಿಗಿಂತ ಬೇರೆ ಯಾವ ಸ್ಥಿತಿಯೂ ಅಷ್ಟೊಂದು ಅಭದ್ರವಾಗಿರಲಾರದು. ಅವನ ಮೇಲ್ಗಡೆ ದುರಾಕ್ರಮಣ ಮಾಡುವವನ ವಿರೋಧಿ ತೀರಗಳು ಬಾಚಿಕೊಂಡಿದ್ದವು ಮತ್ತು ಅವನ ಕ್ಷಿತಿಜಗಳ ದ್ವಾರಗಳಲ್ಲಿ ಖಡ್ಗಧಾರಿಗಳಾದ ಜೇಲಾಧಿಕಾರಿಗಳು ಕಾವಲು ನಡೆಸಿದ್ದರು. ನಂತರ ಅವನು ತನ್ನ ಜೀವನದ ಮೂಲದತ್ತ ಏರಿ ಹೋಗಲು ಸಾಧ್ಯವಾಗದೆ ಹೋದುದರಿಂದ, ಮೂಲ ಅವನ ಅಂತರಂಗದಲ್ಲಿ ಎದ್ದು ಬಂದಿತು. ಮೇಲ್ಗಡೆಯಿಂದ ಪ್ರಕಾಶವನ್ನು ಸ್ವೀಕರಿಸಲು ಅವನಿಗೆ ಸಾಧ್ಯವಾಗದೆ ಹೋದುದರಿಂದ ಪ್ರಕಾಶ ಅವನ ಸತ್ತೆಯ ಕೇಂದ್ರದಲ್ಲಿ ಪ್ರಕಾಶಿಸತೊಡಗಿತು. ವಿಶ್ವಾತೀತ ಪ್ರೇಮದೊಡನೆ ಅವನು ಸಂಸರ್ಗ ಪಡೆಯದೆ ಹೋದುದರಿಂದ ಆ ಪ್ರೇಮ ತನ್ನನ್ನೇ ಸಂಪೂರ್ಣಾಹುತಿಯ

ರೂಪದಲ್ಲಿ ಅರ್ಪಿಸಿಕೊಂಡಿತು ಮತ್ತು ಪ್ರತಿಯೊಬ್ಬ ಮಾನವ ಸತ್ತೆಯಲ್ಲಿ ತನ್ನ ವಾಸಸ್ಥಾನವನ್ನು ಮತ್ತು ಅಭಯಾಶ್ರಮವನ್ನು ಆಯ್ದುಕೊಂಡಿತು.

ಆ ರೀತಿಯಲ್ಲಿ ಈ ಕೀಳಾಗಿ ನೋಡಲಾದ, ನಿರ್ಜನವಾದ, ಆದರೆ ಫಲಪ್ರದವಾದ, ಆಶೀರ್ವಾದ ಪಡೆದ ಭೌತದ್ರವ್ಯದಲ್ಲಿ ಪ್ರತಿಯೊಂದು ಅಣು ದೈವೀ ಯೋಚನೆಯನ್ನು ಒಳಗೊಂಡಿದೆ, ಪ್ರತಿಯೊಂದು ಸತ್ತೆ ತನ್ನಲ್ಲಿ ದೈವೀ ನಿವಾಸಿಯನ್ನು ಕೊಂಡೊಯ್ಯುತ್ತದೆ. ವಿಶ್ವದಲ್ಲಿ ಯಾವ ಸತ್ತೆಯೂ ಮನುಷ್ಯನದಷ್ಟು ಕ್ಷಣಭಂಗುರವಾದದ್ದಿಲ್ಲ ಹಾಗೆಯೆ ಅವನಷ್ಟು ದೈವಿಕವಾದದ್ದು ಬೇರೊಂದಿಲ್ಲ.

ಸತ್ಯ ಹೇಳುವುದಾದರೆ ಅವಮಾನದಲ್ಲಿ ವೈಭವದ ತೊಟ್ಟಿಲಿದೆ.

**– ಶ್ರೀಮಾತೆ**

*

## ಒಂದು ಸಮಯದಲ್ಲಿ ಆಳವಾದ ವೇದನೆಯೊಂದು ನಿಮ್ಮ ಚಿತ್ತಸ್ಥೈರ್ಯವನ್ನು ಕುಂದಿಸಿದಾಗ

ಯಾವುದೊಂದು ಸಮಯದಲ್ಲಿ ಆಳವಾದ ವೇದನೆ, ಸಂವೇದನಾಶಕ್ತಿಯನ್ನು ಕುಂದಿಸುವ ಸಂಶಯ ಇಲ್ಲವೆ ಗಾಢವಾದ ನೋವು ನಿಮ್ಮನ್ನು ನಿರಾಶೆಯಲ್ಲಿ ತಳ್ಳಿದಾಗ ಸ್ಥಿರತೆಯನ್ನು, ಶಾಂತಿಯನ್ನು ಪಡೆಯುವ ಹುಸಿಹೋಗದ ಮಾರ್ಗವಿದೆ.

ನಮ್ಮ ಸತ್ತೆಯ ಆಳಗಳಲ್ಲಿ ಪ್ರಕಾಶವೊಂದು ಹೊಳೆಯುತ್ತಿದೆ, ಅದರ ಉಜ್ವಲತೆ ಅದರ ಪರಿಶುದ್ಧತೆಗೆ ಸಮಾನವಾಗಿರುತ್ತದೆ. ಅದು ವಿಶ್ವಂಭರ ದೇವನ ಜೀವಂತ ಹಾಗೂ ಪ್ರಜ್ಞಾಪೂರ್ಣ ಭಾಗ, ಅವನು ಭೌತದ್ರವ್ಯವನ್ನು ಸಚೇತನಗೊಳಿಸುತ್ತಾನೆ, ಪೋಷಿಸುತ್ತಾನೆ ಮತ್ತು ಪ್ರಕಾಶಮಯವಾದದ್ದನ್ನಾಗಿ ಮಾಡುತ್ತಾನೆ, ಅವನನ್ನು ನೋಡಲು, ಅವನ ದನಿ ಕೇಳಲು ಮತ್ತು ಅವನಿಗೆ ವಿಧೇಯವಾಗಿರಲು ಅಭೀಪ್ಸೆಪಡುವವರಿಗೆ ಅವನು ಸಾಂತ್ವನ ನೀಡುವ ಮತ್ತು ಪ್ರೀತಿಸುವ ಸ್ವೈರಣೆಯಿರುವ ಸಹಾಯಕ. ಯಾವುದೇ ನಿಷ್ಕಾಪಟ್ಯದ ಮತ್ತು ಉಳಿದುಕೊಳ್ಳುವ ಅಭೀಪ್ಸೆ ವ್ಯರ್ಥವಾಗುವುದಿಲ್ಲ, ಬಲವತ್ತರವಾದ ಹಾಗೂ ಗೌರವಪೂರ್ಣ ವಿಶ್ವಾಸ ನಿರಾಶೆಗೊಳಗಾಗುವುದಿಲ್ಲ, ಯಾವುದೇ ನಿರೀಕ್ಷೆ ಮೋಸಕ್ಕೊಳಗಾಗುವುದಿಲ್ಲ. ... ...

ವೇದನೆ ಅನಿವಾರ್ಯವಾದ ಇಲ್ಲವೆ ಅಪೇಕ್ಷಣೀಯವಾದ ಏನೋ ಒಂದಲ್ಲ, ಆದರೆ ಅದು ಬಂದಾಗ, ಎಷ್ಟೊಂದು ಸಹಾಯಕವಾಗಬಲ್ಲದು!



ನಮ್ಮ ಹೃದಯ ಭಗ್ನವಾಗುತ್ತಿದೆ ಎಂದು ನಮಗೆ ಭಾವನೆ ಬಂದ ಪ್ರತಿಕ್ಷಣ ಹೆಚ್ಚು ಆಳವಾದ ದ್ವಾರ ನಮ್ಮೊಳಗೆ ತೆರೆದುಕೊಳ್ಳುತ್ತದೆ, ಹೊಸ ಕ್ಷಿತಿಜಗಳನ್ನು ತೆರೆದು ತೋರಿಸುತ್ತದೆ, ಅವುಗಳಲ್ಲಿ ಗುಪ್ತವಾಗಿರುವ ನಿಧಿಗಳಿರುತ್ತವೆ, ಅವುಗಳ ಬಂಗಾರ ವರ್ಣದ ಅಂತಃಪ್ರವಾಹ ಮತ್ತೊಮ್ಮೆ ಹೊಸ ಮತ್ತು ಹೆಚ್ಚು ಗಾಢವಾದ ಜೀವನವನ್ನು ವಿನಾಶದ ಅಂಚಿನಲ್ಲಿರುವ ಜೀವಿಗೆ ತಂದುಕೊಡುತ್ತದೆ.

ಒಂದರ ನಂತರ ಒಂದರಂತೆ ಬರುವ ಈ ಅವರೋಹಣಗಳ ಮೂಲಕ (ಭಗವಂತ) ನಿನ್ನನ್ನು ತೆರೆದು ತೋರಿಸುವ ಪರದೆಯನ್ನು ತಲುಪುತ್ತೇವೆ, ಅದು ತೆರೆದುಕೊಂಡು ನಿನ್ನ ದರ್ಶನವಾದಾಗ ಓ ಪ್ರಭು, ಇಡೀ ಸತ್ತೆಯಲ್ಲಿ ಒಳನುಗ್ಗುವ ದೈವೀ ಜೀವನವನ್ನು ಕುರಿತು, ಅದರ ಮೇಲೆ ರಭಸದ ಪ್ರವಾಹ ರೂಪದಲ್ಲಿ ಹರಿದು ಬರುವ ದೈವೀ ಪ್ರಕಾಶದ ತೇಜಸ್ಸನ್ನು ಕುರಿತು, ಅದನ್ನು ಎಲ್ಲ ಕಾಲಕ್ಕೆ ಪರಿವರ್ತಿಸುವ ದೈವೀ ಪ್ರೇಮದ ಘನತೆಯನ್ನು ಕುರಿತು ಯಾರಿಗೆ ವರ್ಣಿಸಲು ಸಾಧ್ಯ!

**(2/19–20)** **– ಶ್ರೀಮಾತೆ**

*

## 'ಸಾವಿತ್ರಿ' ಮಹಾಕಾವ್ಯದಿಂದ ಆಯ್ದ ಸಾಲುಗಳು

ಸನಾತನನ ಯೋಚನೆಯನು ನಿನ್ನ ಮನದ ಬೆಳಕು ನಿನ್ನಿಂದ ಬಚ್ಚಿಟ್ಟಿಹುದು,
ನಿನ್ನ ಹೃದಯದ ನಿರೀಕ್ಷೆಗಳು ಸನಾತನನ ಸಂಕಲ್ಪವನು ನಿನ್ನಿಂದ ಬಚ್ಚಿಟ್ಟಿಹವು,
ಲೌಕಿಕ ಸುಖಗಳು ಅಮರನ ದಿವ್ಯಾನಂದವನು ನಿನ್ನಿಂದ ಮುಚ್ಚಿಹಾಕಿಹವು.
ಅದರಿಂದಾಗಿ ಕರೆಯದೆ ಬರುವ ಅಂಧಕಾರದ ದೇವನೊಬ್ಬ ಅವಶ್ಯವೆನಿಸಿಹನು,
ಅವನೇ ಜಗತ್ತಿನ ಭೀತಿಕಾರಕ ಬೋಧಕ, ನೋವನು ಸೃಷ್ಟಿಸುವವ
ವೇದನೆಯೂ ಕೂಡ ಬರಲೇ ಬೇಕು ಅಜ್ಞಾನವಿರುವ ಎಲ್ಲೆಡೆಯಲಿ . . .

*

ದೇವನ ಕಾರ್ಯವನು ಬದಲಿಸಲು, ಅಂದಗೆಡಿಸಲು ಹಕ್ಕು ಸಾಧಿಸುತ,
ಮಾನವನ ಆಳಗಳಲಿ, ಕಾಲದ ಗುಪ್ತ ಹೃದಯದಲಿ
ಮರೆಯಲಿರುವ ಕರಾಳ ವೈರವೊಂದು ಮನೆಮಾಡಿಕೊಂಡಿಹುದು.
ಜಗತ್ತಿನ ಮುನ್ನಡೆಯ ಮೇಲೆ ರಹಸ್ಯ ಹಗೆತನ ಹೊಂಚು ಕಾಯುತಿಹುದು
ಯೋಚನೆ ಮಾತು ಕ್ರಿಯೆಗಳ ಮೇಲೆ ತನ್ನ ಗುರುತನುಳಿಸುವುದು

ಕೈಕೊಂಡ ಕ್ರಿಯೆಯ ಮೇಲೆ ಕಲಂಕ ಕುಂದುಗಳ ಮುದ್ರೆಯನಿರಿಸುವುದು
ಅದು ಹತವಾಗುವವರೆಗೆ ಶಾಂತಿಗೆ ಸ್ಥಳವಿಲ್ಲ ಪೃಥ್ವಿಯ ಮೇಲೆ.

*

ಪಿಸುನುಡಿಯೊಂದು ಮಾನವ ಹೃದಯಕೆ ಅಮಿಷ ತೋರಿಸುವುದು
ವಿವೇಕದ ಕಣ್ಣುಗಳ ಮೇಲೆ ಆತ್ಮದ ಗೌರವದ ಮೇಲೆ ಮೊಹರನೊತ್ತುವುದು
ಇಲ್ಲಿ ನಮ್ಮೆಲ್ಲರ ವೇದನೆಯ ಮೂಲ ಅದಾಗಿಹುದು
ವಿಪತ್ತು ನೋವುಗಳಿಗೆ ಅದು ಪೃಥ್ವಿಯನು ಕಟ್ಟಿ ಹಾಕುವುದು.

*

ಓ ಮರ್ತ್ಯ ಮಾನವ, ಸಹಿಸು ಈ ಲೋಕದ ನೋವಿನ ನಿಯಮವನು
ವೇದನೆ ಪಡುತಿಹ ಲೋಕದೊಳಗಿಂದ ನಿನ್ನ ಕಠಿಣ ಸಾಗುವಿಕೆಯಲಿ
ನಿನ್ನಾತ್ಮದ ಆಧಾರಕೆ ಸ್ವರ್ಗದ ಸಾಮರ್ಥ್ಯಕೆ ವಾಲಿಕೋ
ಉಚ್ಚ ದೈವೀ ಸತ್ಯದತ್ತ ಹೊರಳು, ಪ್ರೇಮ ಶಾಂತಿಗಳಿಗಾಗಿ ಅಭೀಪ್ಸೆಪಡು.
ಮೇಲ್ಗಡೆಯಿಂದ ನಿನಗೆ ಕೊಂಚ ಸಂತಸವನು
ನಿನ್ನ ಮಾನವ ದಿನಗಳ ಮೇಲೆ ದೈವೀ ಸ್ಪರ್ಶವನು ಕಡಕೊಡಲಾಗಿಹುದು
ನಿನ್ನ ದೈನಂದಿನ ದಾರಿಯನು ತೀರ್ಥಯಾತ್ರೆಯದನಾಗಿ ಮಾಡು
ಕಾರಣ ಚಿಕ್ಕ ಸುಖದುಃಖಗಳ ಮೂಲಕವೆ ನೀ ಚಲಿಸುವೆ ದೇವನೆಡೆಗೆ.

**('ಸಾವಿತ್ರಿ' PP. 443, 447, 448, 451)** **– ಶ್ರೀ ಅರವಿಂದರು**

*

## ಯೋಚನೆಗಳು ಹಾಗೂ ಸೂಕ್ತಿಗಳು

25. ದುರ್ದೈವಕ್ಕಾಗಿ ನಾನು ನರಳಿದಾಗ ಮತ್ತು ಅದು ದುಷ್ಟವಾದದ್ದೆಂದು ಕರೆದಾಗ ಇಲ್ಲವೆ ಅಸೂಯೆಯುಳ್ಳವನಾದಾಗ, ನಿರಾಶನಾದಾಗ ನನ್ನೊಳಗೆ ಸನಾತನ ಮೂರ್ಖ ಎಚ್ಚತ್ತುಕೊಂಡಿದ್ದಾನೆ ಎಂದು ತಿಳಿದುಕೊಳ್ಳುತ್ತೇನೆ.

35. ಓ ದುರ್ದೈವವೆ, ಆರಾಧನೀಯನಾಗು, ಏಕೆಂದರೆ ನಿನ್ನ ಮೂಲಕವೆ ನಾನು ನನ್ನ ದೈವೀ ಪ್ರೇಮಿಯ ಮುಖವನ್ನು ನೋಡಿರುವೆ.

135. ಎಲ್ಲ ರೋಗ ಆರೋಗ್ಯದ ಹೊಸ ಸಂತೋಷದತ್ತ ಸಾಗಲು ಒಂದು ಸಾಧನ, ಎಲ್ಲ ದುಷ್ಟವಾದದ್ದು ಹಾಗೂ ನೋವು ಇನ್ನೂ ಹೆಚ್ಚಿನ ಗಾಢ ದಿವ್ಯಾನಂದಕ್ಕಾಗಿ, ಒಳ್ಳೆಯದಕ್ಕಾಗಿ ಪ್ರಕೃತಿಯ ಶ್ರುತಿಗೂಡಿಸುವಿಕೆ, ಎಲ್ಲ ಮೃತ್ಯು



ಅತ್ಯಂತ ವಿಸ್ತಾರವಾದ ಅಮರತ್ವದತ್ತ ತೆರೆದುಕೊಳ್ಳುವಿಕೆ. ಏಕೆ ಮತ್ತು ಹೇಗೆ ಇದು ಈ ರೀತಿಯಾಗಿ ಇರಬೇಕೆಂಬುದು ದೇವನ ರಹಸ್ಯ, ಅಹಂಕಾರರಹಿತವಾಗಿ ಪರಿಶುದ್ಧಗೊಂಡ ಆತ್ಮ ಮಾತ್ರ ಆ ರಹಸ್ಯದೊಳಗೆ ನುಗ್ಗಿ ಹೋಗಬಲ್ಲದು.

522. ದೇವರು ನಮ್ಮನ್ನು ಪ್ರತಿಯೊಂದು ಈಡನ್[1]ದಿಂದ ಹೊರದೂಡುತ್ತಾನೆ. ಅದರಿಂದಾಗಿ ಮರುಭೂಮಿಯ ಮೇಲೆ ಪ್ರಯಾಣ ಕೈಕೊಳ್ಳುವ ಒತ್ತಾಯಕ್ಕೊಳಗಾಗಿ ಹೆಚ್ಚು ದೈವಿಕವಾದ ಸ್ವರ್ಗದತ್ತ ಹೋಗಬಹುದು. ಅಂತಹ ಬಿಸಿಲಿನಿಂದ ಬಾಡಿದ, ಭಯಾನಕ ದಾಟಿ ಹೋಗುವಿಕೆ ಅವಶ್ಯವಿದೆಯೆ ಎಂದು ನೀವು ಆಶ್ಚರ್ಯಚಕಿತರಾದರೆ ನಿಮ್ಮ ಕಣ್ಣಿಗೆ ಮಣ್ಣೆರಚುವ ನಿಮ್ಮ ಮನಸ್ಸಿನ ಮಬ್ಬು ಆಸೆಗಳು ಮತ್ತು ರಹಸ್ಯ ಸುಖ–ಸಂತೋಷಗಳ ಹಿಂದಿರುವ ಆತ್ಮವನ್ನು ಕುರಿತು ನೀವು ಅಭ್ಯಾಸ ಮಾಡಿರುವುದಿಲ್ಲ.

501. ಆದಾಗ್ಯೂ, ಮನುಷ್ಯನ ಆತ್ಮವೆ, ವೇದನೆಯನ್ನು ಅರಸಿಕೊಂಡು ಹೋಗದಿರು, ಏಕೆಂದರೆ ಅದು ದೇವನ ಸಂಕಲ್ಪವಲ್ಲ, ಅವನ ಸಂತೋಷವನ್ನಷ್ಟೇ ಅರಸು. ವೇದನೆಯನ್ನು ಕುರಿತು ಹೇಳುವುದಾದರೆ ಅವನ ದೈವಾನುಗ್ರಹದಿಂದ ನಿನಗೆ ಅವಶ್ಯವಾದಷ್ಟು ಸಲ ಮೇಲಿಂದ ಮೇಲೆ ನಿಶ್ಚಿತವಾಗಿ ಬರುತ್ತದೆ, ಆಗ ಅದನ್ನು ಸಹಿಸಿಕೋ, ಅದರಿಂದಾಗಿ ಕೊನೆಯಲ್ಲಿ ಅದರ ಸುಖ ಸಂತೋಷದ ಹೃದಯವನ್ನು ಕಂಡುಕೊಳ್ಳುವಿ.

470. ದೇವರು ನನ್ನಿಂದ ಏನೆಲ್ಲವನ್ನು ಹಿಡಿದಿಟ್ಟುಕೊಂಡಿದ್ದಾನೆಯೋ ಅದನ್ನು ಅವನು ತನ್ನ ಪ್ರೇಮ ಹಾಗೂ ವಿವೇಕದಿಂದ ಹಿಡಿದಿಟ್ಟುಕೊಂಡಿದ್ದಾನೆ. ನಾನು ಅದನ್ನು ಆಗ ಗ್ರಹಿಸಿದ್ದರೆ ಶ್ರೇಷ್ಠವಾಗಿರುವ ಒಳ್ಳೆಯದಕ್ಕೆ ಶ್ರೇಷ್ಠ ವಿಷವಾಗುವ ತಿರುವನ್ನು ಕೊಡುತ್ತಿದ್ದೆ ಎಂಬುದನ್ನು ನಾನು ನೋಡಿದ್ದೇನೆ. ಆದಾಗ್ಯೂ ಕೆಲವೊಮ್ಮೆ ನಾವು ಒತ್ತಾಯಪಡಿಸಿದಾಗ ಅವನು ವಿಷವನ್ನು ಕುಡಿಯಲು ಕೊಡುತ್ತಾನೆ, ಅದರಿಂದಾಗಿ ನಾವು ಅದರಿಂದ ಹೊರಳುವುದನ್ನು ಕಲಿತುಕೊಳ್ಳುವಂತಾಗಬಹುದು ಮತ್ತು ಅವನ ಜ್ಞಾನದಿಂದ ಅಮೃತ ಹಾಗೂ ಅಪ್ಯಾಯಮಾನವಾದ ಪಾನೀಯದ ರುಚಿ ನೋಡುವಂತಾಗಬಹುದು.

---

**1** ಸೃಷ್ಟಿ ಕುರಿತು ಬೈಬಲ್ಲಿನಲ್ಲಿ ಹೇಳಲಾಗಿರುವುದರಲ್ಲಿ ಆ್ಯಡಮ್ ಮತ್ತು ಈವ್ ವಾಸಿಸುತ್ತಿದ್ದ ಸ್ಥಳ (ತೋಟ). ಇನ್ನೊಂದು ಅರ್ಥದಲ್ಲಿ ಈಡನ್ ಎಂದರೆ ಹಾಳಾಗಿರದ ಸಂತೋಷ ಇಲ್ಲವೆ ಸೌಂದರ್ಯವಿರುವ ಸ್ಥಳ.

137. ಸಂಪರ್ಕವೊಂದು ಬಂದಾಗ ಅದು ನೋವನ್ನಾಗಲಿ, ಸಂತೋಷ–ವನ್ನಾಗಲಿ ಸೃಷ್ಟಿಸಬೇಕೆಂಬ ನಿರ್ದಯ, ಬದಲು ಮಾಡಲಾಗದ (ineffugable) ನಿಯಮವಿದೆ ಎಂದಲ್ಲ. ಅಂಗಗಳ ಮೇಲೆ ಬಾಹ್ಯದಿಂದಾಗುವ ಬ್ರಹ್ಮನ್‌ನ ದಾಳಿ ಅಥವಾ ಒತ್ತಡವನ್ನು ಸಂಧಿಸುವ ಆತ್ಮದ ರೀತಿ ಯಾವುದಾದರೊಂದು ಪ್ರತಿಕ್ರಿಯೆಯನ್ನು ನಿರ್ಧರಿಸುತ್ತದೆ.

138. ನಿನ್ನಲ್ಲಿರುವ ಆತ್ಮದ ಶಕ್ತಿ, ಬಾಹ್ಯದಿಂದ ಬರುವ ಅಂತಹದೇ ಶಕ್ತಿಯನ್ನು ಸಂಧಿಸಿ ಆ ಸಂಪರ್ಕದ ಪ್ರಮಾಣಗಳನ್ನು ಮನಸ್ಸಿನ ಅನುಭವದ ಹಾಗೂ ದೇಹದ ಅನುಭವದ ಮೌಲ್ಯಗಳಲ್ಲಿ ಸಮರಸಗೊಳಿಸಲಾರದು, ಆದ್ದರಿಂದ ನಿನಗೆ ನೋವು, ದುಃಖ ಹಾಗೂ ಅಸೌಖ್ಯಗಳು ಉಂಟಾಗುತ್ತವೆ. ನಿನ್ನಲ್ಲಿರುವ ಶಕ್ತಿ ಕೊಡುವ ಪ್ರತ್ಯುತ್ತರಗಳನ್ನು ಜಗತ್ತಿನ ಶಕ್ತಿಯ ಪ್ರಶ್ನೆಗಳಿಗೆ ಸರಿ ಹೊಂದಿಸಿಕೊಳ್ಳುವುದನ್ನು ಕಲಿತುಕೊಂಡಾಗ ನೋವು ಹರ್ಷವಾಗುವುದನ್ನು ಇಲ್ಲವೆ ಪರಿಶುದ್ಧ ದಿವ್ಯಾನಂದ–ವಾಗುವಂತೆ ತಿರುವು ಪಡೆಯುವುದನ್ನು ಕಂಡುಕೊಳ್ಳುವಿ. ಸರಿಯಾದ ಸಂಬಂಧ ದಿವ್ಯಾನಂದಕ್ಕಾಗಿರುವ ಷರತ್ತು, ಆನಂದದ ಬೀಗದ ಕೈಯಾದ ಋತಮ್.

177. ಪರಿಪೂರ್ಣ ವಿಶ್ವವ್ಯಾಪಿ ದೃಷ್ಟಿ ಮತ್ತು ವಿಶ್ವವ್ಯಾಪಿ ಭಾವನೆ ಎಲ್ಲ ದೋಷಕ್ಕೆ ಹಾಗೂ ವೇದನೆಗೆ ಚಿಕಿತ್ಸೆ ನೀಡುತ್ತದೆ, ಆದರೆ ಬಹಳಷ್ಟು ಜನರು ತಮ್ಮ ಅಹಂಕಾರವನ್ನು ಭವ್ಯವಾಗಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರೆ.

285. ನಿನ್ನ ಅಂಗಗಳು ನಿರಾಶೆ ಮತ್ತು ದೌರ್ಬಲ್ಯಗಳೊಂದಿಗೆ ಒಲವು ತೋರಿದಾಗ "ನಾನು ಬ್ಯಾಕ್ಕಸ್ ಮತ್ತು ಏರೆಸ್ ಮತ್ತು ಅಪೊಲೋ, ನಾನು ಪರಿಶುದ್ಧ ಅಜೇಯ ಅಗ್ನಿ, ಸದಾ ಪ್ರಜ್ವಲಿಸುತ್ತಿರುವ ಸೂರ್ಯ" ಎಂದು ಯೋಚಿಸು.

**(12/426–96)** – ಶ್ರೀ ಅರವಿಂದರು

*

| **ಒಪ್ಪೋಲೆ : ಅಖಿಲ ಭಾರತ ಪತ್ರಿಕೆ – ಫೆಬ್ರವರಿ, 2013** | | |
|---|---|---|
| **ಪುಟ ಮತ್ತು ಸಾಲು** | **ತಪ್ಪು** | **ಒಪ್ಪು** |
| 33, ಕೆಳಗಿನಿಂದ 2ನೆಯ ಸಾಲು | ಕ್ರಿಯೆಯಾಗಿ | ಕ್ರಿಯೆಗಾಗಿ |
| 39, 8ನೆಯ ಸಾಲು | ಪರಿಶುದ್ಧಗೊಳಿಸಬೇಕಾಗುತ್ತವೆ | ಪರಿಶುದ್ಧಗೊಳಿಸಬೇಕಾಗುತ್ತದೆ |



# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

22ನೇ ಫೆಬ್ರವರಿಯಿಂದ 28ನೇ ಫೆಬ್ರವರಿ 2013 ಬೆಳಗ್ಗೆ 8.30 ರಿಂದ 12.30 ರ ವರೆಗೆ "ಸಾವಿತ್ರಿ ಯಜ್ಞ" (Chanting of Sri Aurobindo's Savitri - A Legend and a Symbol) ವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಹಿರಿಯ ಗುರುಬಂಧುಗಳು ಹಾಗೂ ಶ್ರೀ ಮಾತಾರವಿಂದರ ಭಕ್ತ ವೃಂದದವರು ಭಾಗವಹಿಸಿದ್ದರು ಮತ್ತು ಶ್ರೀ ಅರವಿಂದರ ಸಾವಿತ್ರಿಯನ್ನು ಪಠಿಸಿ ಯಜ್ಞವನ್ನು ಪೂರ್ಣಗೊಳಿಸಿದರು.

28ನೇ ಫೆಬ್ರವರಿ 2013 ರ ಗುರುವಾರದಂದು ಸಾಯಂಕಾಲ 5.30 ರಿಂದ 7.00 ಗಂಟೆಯವರೆಗೆ ಶ್ರೀಯುತ ಪ್ರೊ. ಆರ್.ವೈ. ದೇಶಪಾಂಡೆ, ಶ್ರೀ ಅರವಿಂದೋ ಆಶ್ರಮ, ಪುದುಚೇರಿ, ಇವರು "ಸಾವಿತ್ರಿ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

1ನೇ ಮಾರ್ಚ್ 2013 ರ ಶುಕ್ರವಾರದಂದು ಸಾಯಂಕಾಲ 5.30 ರಿಂದ 7.00 ಗಂಟೆಯವರೆಗೆ ಶ್ರೀಯುತ ಪ್ರೊ. ಆರ್.ವೈ. ದೇಶಪಾಂಡೆ, ಶ್ರೀ ಅರವಿಂದೋ ಆಶ್ರಮ, ಪುದುಚೇರಿ, ಇವರು "ಸಾವಿತ್ರಿ" (Session -2) ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು, ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು.


**ಬೇಕಾಗಿದ್ದಾರೆ**

ಪಾಂಡಿಚೇರಿಯ ಕರ್ನಾಟಕ ನಿಲಯಂ ಕಾರ್ಯಾಲಯದಲ್ಲಿ ಕ್ಲರ್ಕ್ ಕೆಲಸಕ್ಕಾಗಿ ಬೇಕಾಗಿದ್ದಾರೆ. ಅಭ್ಯರ್ಥಿಗಳಿಗೆ ಕನ್ನಡ ಭಾಷೆ ಮತ್ತು ಕಂಪ್ಯೂಟರ್ ಜ್ಞಾನವಿರಬೇಕು. ಶ್ರೀ ಅರವಿಂದಾಶ್ರಮ ಸಾಧಕರಿಗೆ ಆದ್ಯತೆ ಕೊಡಲಾಗುವುದು. ಸಂಪರ್ಕಿಸಬೇಕಾದ ವಿಳಾಸ :

ಕರ್ನಾಟಕ ನಿಲಯಂ, ನಂ.1, ಮಾಂಟೇಸರಿ ಸ್ಟ್ರೀಟ್,
ಪಾಂಡಿಚೇರಿ – 605 001. ದೂರವಾಣಿ ಸಂಖ್ಯೆ : 0413–2233699



*"Be more conscious and you will no more be injured."*

- The Mother

**RNI No. 22511/1971**
No. of Pages **44 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.